

ಕರ್ನಾಟಕ ಕಲಾವಿದರ ಮಾಲೆ - 18

ವೈ. ನಾಗರಾಜು



ಕರ್ನಾಟಕ ಲಲಿತಕಲಾ ಅಕಾಡೆಮಿ



ವೈ. ನಾಗರಾಜು

ಆ. ಲ. ನರಸಿಂಹನ್



ಕರ್ನಾಟಕ ಲಲಿತಕಲಾ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು-2

Y. Nagaraju : A Biography by A.L.Narasimhan.
Published by the Karnataka Lalitkala Academy,
14/3, Nrupathunga Road, Bangalore - 560 002.

General Editor : H.N.Suresh

English Translation : A.P.Niranjan

Layout : C.S.Krishna Setty.

Cover page :
The Last Four Rulers of Mysore - Y.Nagaraju-1926.
Courtesy : Directorate of Archaeology & Museums, Mysore

First Impression : 1989. Copies : 1000

Price Rs.6.00

Printed at :
Brindavan Printers & Publishers Pvt. Ltd.
Bangalore 560 004.



ವೈ.ನಾಗರಾಜು

ಜನನ : 1905

ನಿಧನ : 1979

ಅಧ್ಯಕ್ಷರ ನುಡಿ



ನಾಡಿನ ಕಲೆ ನಡೆದು ಬಂದ ದಾರಿಯನ್ನು ಸಾಧ್ಯವಾದಷ್ಟು ಮಟ್ಟಿಗೆ ದಾಖಲೆ ಮಾಡುವ ಕಾರ್ಯ ಕರ್ನಾಟಕ ಲಲಿತಕಲಾ ಅಕಾಡೆಮಿಯಲ್ಲಿ ನಿರಂತರವಾಗಿ ನಡೆಯುತ್ತಿದೆ. ಈ ರಾಜ್ಯದ ಹಿರಿಯ ಕಲಾವಿದರ ಕಲೆ – ಜೀವನ ಕುರಿತು ಕಿರು ಪುಸ್ತಕಗಳನ್ನು ಪ್ರಕಟಿಸುವ ಕಾರ್ಯವು ಸಹ ಇಲ್ಲಿ ಸಾಗುತ್ತಿದೆ.

ಇದುವರೆಗೆ ಅಕಾಡೆಮಿಯು ಈ ಮಾದರಿಯ ಹದಿನೇಳು ಪುಸ್ತಕಗಳನ್ನು ಹೊರತಂದಿದೆ. ಈ ವರ್ಷ ಮತ್ತೆ ಕೆಲವು ಹೆಸರಾಂತ ಕಲಾವಿದರ ಕಲೆ – ಜೀವನ ಕುರಿತ ಪುಸ್ತಕಗಳನ್ನು ಅಕಾಡೆಮಿ ಸಂತೋಷದಿಂದ ಪ್ರಕಟಿಸುತ್ತಿದೆ.

ಸಾಂಪ್ರದಾಯಿಕ ಚಿತ್ರಕಲೆಯ ಪ್ರವರ್ತಕರಾದ ಶ್ರೀ ವೈ.ನಾಗರಾಜು ಅವರ ಕಲೆ – ಜೀವನ ಕುರಿತ ಈ ಪುಸ್ತಕವನ್ನು ಓದುಗರಿಗೆ ಅರ್ಪಿಸಲು ಸಂತೋಷವಾಗುತ್ತಿದೆ. ಈ ಕಲಾವಿದರು ಸುದೀರ್ಘ ಕಾಲ ಮೈಸೂರಿನ ಅರಮನೆಯ ಕಲಾವಿದರಾಗಿ ಸೇವೆ ಸಲ್ಲಿಸಿದ್ದಾರೆ. ವೈ.ನಾಗರಾಜು ಅವರ ಮಹತ್ವಪೂರ್ಣ ವಿದೇಶಿ ಪ್ರಯಾಣದ ಅನುಭವಗಳೂ ಸಹ ಈ ಪುಸ್ತಕದಲ್ಲಿ ದಾಖಲಾಗಿದೆ. ಇಂದು ದೇಶ ವಿದೇಶಗಳ ಕಲಾ ಗ್ಯಾಲರಿಗಳಲ್ಲಿ ಶ್ರೀ ವೈ.ನಾಗರಾಜು ಅವರ ಕಲಾಕೃತಿಗಳು ಮೆರೆದಿದೆ. ಇವುಗಳೆಲ್ಲದರ ಸೂಕ್ಷ್ಮ ಪರಿಚಯವನ್ನು ತರುಣ ಬರಹಗಾರ ಶ್ರೀ ಅ.ಲ.ನರಸಿಂಹನ್ ಅವರು ಪ್ರಸ್ತುತ ಪುಸ್ತಕದಲ್ಲಿ ಸಮಗ್ರವಾಗಿ ಅವಲೋಕಿಸಿದ್ದಾರೆ.

ಕಲಾವಿದರ ಪರಿಚಯ ಪುಸ್ತಕ ಮಾಲೆಯ ಸಂಪಾದಕತ್ವವನ್ನು ವಹಿಸಿರುವ ಶ್ರೀ ಎಚ್.ಎನ್.ಸುರೇಶ್ ಹಾಗೂ ಗ್ರಂಥಕರ್ತರಾದ ಶ್ರೀ ಅ.ಲ.ನರಸಿಂಹನ್ ಅವರಿಗೆ ಅಕಾಡೆಮಿಯ ಪರವಾಗಿ ನನ್ನ ಹೃತ್ಪೂರ್ವಕ ವಂದನೆಗಳು. ಹಾಗೆಯೇ ಪುಸ್ತಕದ ವಿನ್ಯಾಸವನ್ನು ಮಾಡಿಕೊಟ್ಟಿರುವ ಬಿ.ಸು.ಕೃಷ್ಣಸೆಟ್ಟಿ ಅವರಿಗೆ ಧನ್ಯವಾದಗಳು.

ವಿದ್ವಾಂಸರಿಗೂ, ಕಲಾ ವಿದ್ಯಾರ್ಥಿಗಳಿಗೂ ಏಕರೂಪವಾಗಿ ಉಪಯುಕ್ತವಾಗುವ ಈ ಪುಸ್ತಕವನ್ನು ಕಲಾಭಿಮಾನಿಗಳು ಸ್ವಾಗತಿಸುತ್ತಾರೆ ಎಂಬ ನಂಬಿಕೆ ನನಗಿದೆ.

ಆರ್.ಎಂ.ಹಡಪದ್
ಅಧ್ಯಕ್ಷರು
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು.

ವೈ. ನಾಗರಾಜು

ಕರ್ನಾಟಕದ ಚಿತ್ರಕಲೆಯು ಒಂದು ಮುಖ್ಯವಾದ ಪರಿವರ್ತನೆಯ ಹಂತದಲ್ಲಿ ಇದ್ದಾಗ ಇದ್ದಂತಹ ಕಲಾವಿದರು ವೈ. ನಾಗರಾಜು. ಆ ಕಾಲ ಒಂದು ಚಿತ್ರಕಲಾ ಪರಂಪರೆಯಲ್ಲಿ , ಶೈಲಿ, ಮಾಧ್ಯಮ, ನಿರೂಪಣೆ, ಉದ್ದೇಶ ಇತ್ಯಾದಿ ಹಲವು ಪ್ರಕಾರಗಳಲ್ಲಿ ಬದಲಾವಣೆ ತರುತ್ತಿತ್ತು. ಅದೇ ವೇಳೆಯಲ್ಲಿ ರಾಜಕೀಯವಾಗಿಯೂ ಸಾಮಾಜಿಕವಾಗಿಯೂ ಸಹ ಹೊಸ ಬದಲಾವಣೆಗಳು ಕಂಡುಬರುತ್ತಿತ್ತು. ನಾಗರಾಜು ಅವರು ಇವೆರಡೂ ಕ್ಷೇತ್ರಗಳಲ್ಲಿಯ ಪರಿವರ್ತನೆಯನ್ನು ಅರಿತುಕೊಂಡರು. ತಮ್ಮ ಕಾಣಿಕೆಯನ್ನು ನೀಡಿದರು. ಎರಡು ಪೀಳಿಗೆಗಳ ಮಧ್ಯದಲ್ಲಿ ನಾಗರಾಜು ಮತ್ತು ಅವರಂತೆ ಕಲೆಗೆ ಸೇವೆ ಸಲ್ಲಿಸಿದ ಕೆಲವು ಸರೀಕರು ಚಿತ್ರಕಲೆಯ ಇತಿಹಾಸದಲ್ಲಿ ಮುಖ್ಯ ಪಾತ್ರವನ್ನು ವಹಿಸಿದ್ದರು. ಸಾಮಾಜಿಕವಾಗಿಯೂ ಆ ಕಾಲ ಅಷ್ಟೇ ಮುಖ್ಯವಾದುದು.

ಹಿನ್ನೆಲೆ

ಮೈಸೂರು ಅರಸರಿಗೆ ರವಿವರ್ಮ ತನ್ನ ಕೊನೆಯ ಕಂತಿನ ಚಿತ್ರಗಳನ್ನು 1905ರಲ್ಲಿ ಕೊಟ್ಟ. ಅದೇ ವರ್ಷ ನಾಗರಾಜು ಜನಿಸಿದರು. ರವಿವರ್ಮ ಮರುವರುಷ ತೀರಿಕೊಂಡ (1906). ಮುಂದಿನ ವರ್ಷ (1907) ಸಹೋದರ ಹಾಗೂ ಕಲಾವಿದ ಸುಬ್ರಮಣ್ಯರಾಜು ಜನಿಸಿದರು. ಸಂಪ್ರದಾಯ ಚಿತ್ರಗಳಿಂದ ಆ ಕಾಲಕ್ಕೆ ಆಧುನಿಕವೆನಿಸಿದ್ದ ನೈಜ ಶೈಲಿಯ ಚಿತ್ರಗಳ ಉಗಮವಾದ ಸಂಧಿಕಾಲವದು. ಅಜಂತೆಯ ಯುಗ, ಮೊಗಲ್ ಹಾಗೂ ದಖನಿ ಯುಗ, ಮಧ್ಯಕಾಲಕ್ಕೆ ವಿಜಯನಗರ ಹಾಗೂ ನಂತರದ ತಂಜಾವೂರು ಮತ್ತು ಮೈಸೂರು ಸಂಪ್ರದಾಯ ಶೈಲಿಯ ಚಿತ್ರಗಳ ಹಲವು ಘಟ್ಟಗಳನ್ನು ದಾಟಿದ್ದ ಮೈಸೂರು (ಕರ್ನಾಟಕ) ನೈಜ ಶೈಲಿಯನ್ನು ಅಷ್ಟೇ ಆದರದಿಂದ ಬರಮಾಡಿಕೊಂಡಿತು. ಆದರೆ ಹಿಂದಿನ ಘಟ್ಟಗಳಲ್ಲಿ , ಚಿತ್ರ ರಚನೆಯ ತಂತ್ರ , ವಿನ್ಯಾಸ, ನಿರೂಪಣಾ ಶೈಲಿಗಳಲ್ಲಿ ಪರಸ್ಪರ ಭಿನ್ನತೆಯಿದ್ದರೂ ಇಡೀ ಕಲೆಯ, ಕಲಾವಿದನ ಸ್ಥಾನಮಾನಗಳಾಗಲೀ ಸಾಮಾಜಿಕ ನೆಲೆಗಟ್ಟಾಗಲೀ ಬದಲಾವಣೆಗೊಳ್ಳಲಿಲ್ಲ . ಪೌರಾಣಿಕ ಕಥಾ ಸಂದರ್ಭಗಳಿಗೆ ಪೂರಕ ಚಿತ್ರಗಳಾಗುವ ಮಟ್ಟದಿಂದ ಮೇಲೇರಲಿಲ್ಲ . ರವಿವರ್ಮನ ಆಗಮನ; ಛಾಯಾಚಿತ್ರದ ಅನ್ವೇಷಣೆ; ತಂತ್ರ ಮತ್ತು ವಸ್ತುವಿನಲ್ಲಿ ಬದಲಾವಣೆ; ರಾಷ್ಟ್ರೀಯ ಆಂದೋಲನ ಮತ್ತು ಸಾಮಾಜಿಕ ಪ್ರಜ್ಞೆ ; ಕಲೆಯ ಬಗ್ಗೆ ಇದ್ದ ಕಲ್ಪನೆ, ಧೋರಣೆಗಳಲ್ಲಿ ಬದಲಾವಣೆ; ಕಲೆ ಒಂದು ಕುಲ ಕಸುಬಾಗಿದ್ದು ತಪ್ಪಿ ಬೇರೆಯವರೂ ಈ ಕ್ಷೇತ್ರಕ್ಕೆ ಬಂದುದು; ರಾಜಾಶ್ರಯ ಹೋಗಿ ಜನಾಶ್ರಯಕ್ಕೆ ಬಂದುದು; ಕಲೆ ಒಂದು ವಿದ್ಯಾಭ್ಯಾಸದ ಮೂಲಕ ಕಲಿಯಬಹುದು ಎನ್ನುವ ಪರಿಕಲ್ಪನೆ ಇತ್ಯಾದಿ ಹಲವಾರು ದೃಷ್ಟಿಗಳಿಂದ ನೈಜವಾದಿ (ರಿಯಲಿಸ್ಟಿಕ್)ಗಳ ಹಂತ, ಚಿತ್ರಕಲೆಯಲ್ಲಿ ಒಂದು ಅಭೂತಪೂರ್ವ ಬದಲಾವಣೆಯನ್ನು ತಂದಿತು. ಈ ಎಲ್ಲಾ ಬದಲಾವಣೆಗಳಿಗೆ ಸದ್ದು ಗದ್ದಲವಿಲ್ಲದೆ ಸಾಕ್ಷೀಭೂತರಾದವರೆಂದರೆ ನಾಗರಾಜು ಅವರು. ಆದರೆ ಜೀವಿತ ಕಾಲದಲ್ಲಿ ಪ್ರಚಾರಕ್ಕೆ ಬರದೇ ಹೆಚ್ಚು ಸಂಪರ್ಕವಿಲ್ಲದೆ ತಮ್ಮ ಕೃತಿ ರಚನೆಯಲ್ಲಿ, ಕಾಲಧರ್ಮದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತ, . ಸಂಸಾರ, ಜೀವನ ನಿರ್ವಹಣೆಯಲ್ಲಿ

ಬಿಡುವಿಲ್ಲದೆ, ಮಾರಾಟಕ್ಕಲ್ಲದೆ ಬೇರೆ ಕೃತಿ ರಚಿಸುವ ವೇಳೆಯಿಲ್ಲದೆ, ಮೈಸೂರನ್ನೇ ಕೊನೆಗಾಲದವರೆಗೂ ತಮ್ಮ ಕ್ಷೇತ್ರವಾಗಿ ಆಯ್ಕೆ ಮಾಡಿಕೊಂಡದ್ದು ಅವರನ್ನು ಅಷ್ಟಾಗಿ ಪ್ರಸಿದ್ಧಿಗೆ ತರಲಿಲ್ಲವೆನ್ನಬಹುದು.

ಜನನ

ಸೋಮವಂಶ ಆರ್ಯ ಕ್ಷತ್ರಿಯ ಪಂಗಡಕ್ಕೆ ಸೇರಿದ ನಾಗರಾಜು ಅವರ ಹಿರಿಯರು ವಿಜಯನಗರದ ಕಾಲದಲ್ಲಿ ತಲೆಮಾರುಗಳಿಂದ ಚಿತ್ರಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದ ವಿಜಯನಗರದ ಪತನಾನಂತರ ಚಿತ್ರದುರ್ಗ, ತಂಜಾವೂರು, ಆಲಂಪುರ, ಜಾವಗಲ್ಲು, ಸಿರ ಇತ್ಯಾದಿ ಹಲವಾರು ಕಡೆಗಳಿಗೆ ಕಲಾವಿದರು ಚದುರಿಹೋದರು. ನಾಗರಾಜು ಅವರ ಹಿರಿಯರು ತುಮಕೂರು ಜಿಲ್ಲೆಯ ತುರುವೇಕೆರೆಯಲ್ಲಿ ನೆಲೆಸಿದ್ದರು. ಮೈಸೂರು ಜಿಲ್ಲೆಯನ್ನು ಹೊರತುಪಡಿಸಿದರೆ ಇಂದಿಗೂ ಹೆಚ್ಚಿನ ಸಂಖ್ಯೆಯಲ್ಲಿ ಸಂಪ್ರದಾಯಕ ಭಿತ್ತಿಚಿತ್ರಗಳು ಕಂಡುಬರುವುದು ತುಮಕೂರು ಜಿಲ್ಲೆಯಲ್ಲಿಯೇ. ತುರುವೇಕೆರೆಯ ಬಳಿಯ ನೊಣವಿನಕೆರೆಯ ಸುಬ್ಬಣ್ಣ ಎಂಬಾತ ಕಳೆದ ಶತಮಾನದ ಅಂತ್ಯದಲ್ಲಿ ತಿಪಟೂರು ಬಳಿಯ ಕೆರೆಗೋಡಿ ರಂಗಾಪುರದಲ್ಲಿಯ ಭಿತ್ತಿಚಿತ್ರಗಳನ್ನು ಮಾಡಿದ್ದು ಆತನೂ ಇವರ ಹಿರಿಯ ಸಂಬಂಧಿಯೇ ಇರಬಹುದು. ತುರುವೇಕೆರೆಯಿಂದ ದಿವಾನ್ ಪೂರ್ಣಯ್ಯನವರು ಮೈಸೂರಿಗೆ ನಾಗರಾಜುಅವರ ಹಿರಿಯರನ್ನು ಕರೆದು ತಂದರು. ಅದೇ ವಂಶದಲ್ಲಿ ಯಲ್ಲಪ್ಪ, ವೀರಣ್ಣ ಮುಂತಾದವರು ಮೈಸೂರು ಅರಮನೆಯಲ್ಲಿ ಚಿತ್ರಗಾರರಾಗಿದ್ದರು. ಮುಂದೆ ಇವರ ವಂಶದವರೇ ಆದ ಸುಂದರಯ್ಯನವರು ಮುಮ್ಮಡಿ ಕೃಷ್ಣರಾಜ ಒಡೆಯರು, ಚಾಮರಾಜ ಒಡೆಯರ ಕಾಲದಲ್ಲಿ ಆಸ್ಥಾನ ಕಲಾವಿದರಾಗಿದ್ದರು.

ಮೈಸೂರಿನ ಜಗನ್ಮೋಹನ ಕಲಾಶಾಲೆ, ಶ್ರೀರಂಗಪಟ್ಟಣದ ದರಿಯಾದೌಲತ್ ಅಲ್ಲಿಯ ಚಿತ್ರಗಳು ಇವರ ಸಮಕ್ಷಮದಲ್ಲಿ ರಚಿತವಾದವು. ಇವರ ಮಗ ಯಲ್ಲಪ್ಪ ಅವರು ಸೃಜನಶೀಲ ಚಿತ್ರ ಕಲಾವಿದರಲ್ಲದೇ ಹೋದರೂ ಅರಮನೆಯಲ್ಲಿ ಡ್ರಾಫ್ಟ್‌ಮನ್ ಆಗಿದ್ದವರು. ಇವರ ಪತ್ನಿ ಶ್ರೀಮತಿ ಕೃಷ್ಣಮ್ಮ. ನಾಲ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಹಿಂದೆ ಬೆಂಕಿ

ಬಿದ್ದು ಸುಟ್ಟುಹೋಗಿದ್ದ ಅರಮನೆಯನ್ನು ಹೊಸದಾಗಿ ಕಟ್ಟುವಾಗ ಯಲ್ಲಪ್ಪನವರು ಡಿಸೈನರಾಗಿದ್ದು ಕ್ರಮೇಣ ಅರಮನೆ ಡ್ರಾಫ್ಟ್‌ಮನ್ ಪದವಿಗೇರಿದ್ದರು. ತಮಗೆ ಪುತ್ರ ಜನನವಾಗಬೇಕೆಂದು ಶ್ರೀರಂಗಪಟ್ಟಣದ ಪಶ್ಚಿಮವಾಹಿನಿಯಲ್ಲಿ ನಾಗಪ್ರತಿಷ್ಠೆ ಮಾಡಿದ ಮೇಲೆ ಹುಟ್ಟಿದ ಮೊದಲ ಮಗನಿಗೆ ನಾಗರಾಜು ಎಂದೇ ಹೆಸರಿಸಿದರು (27, ಆಗಸ್ಟ್ 1905). ಎರಡು ವರ್ಷಗಳ ನಂತರ ಹುಟ್ಟಿದ ಇನ್ನೊಂದು ಗಂಡು ಮಗುವಿಗೆ ಸುಬ್ರಹ್ಮಣ್ಯರಾಜು ಎಂದು ಹೆಸರಿಸಿದರು (3, ಡಿಸಂಬರ್ 1907). ಅವರು ಪ್ರಖ್ಯಾತ ಕಲಾವಿದರಾಗಿ ನಮಗೆ ಇಂದಿಗೂ ಮಾರ್ಗದರ್ಶಕರಾಗಿದ್ದಾರೆ.

ವಿದ್ಯಾಭ್ಯಾಸ

ನಾಗರಾಜು ಅವರ ಕಿಂಡರ್ ಗಾರ್ಟನ್ ಹಂತದ ವಿದ್ಯಾಭ್ಯಾಸ ಅವರ ಐದನೇ ವರ್ಷದಲ್ಲಿ ಮೈಸೂರಿನ ರಾಜ ಸ್ಕೂಲ್‌ನಲ್ಲಿಯೇ ಆರಂಭವಾಯಿತು. ಮುಂದೆ ಐದು ವರ್ಷಗಳ ವಿದ್ಯಾಭ್ಯಾಸ ಅಲ್ಲಿಗೇ ನಿಂತು, ತಮ್ಮ ಹತ್ತನೇ ವಯಸ್ಸಿಗೆ ಶ್ರೀ ಚಾಮರಾಜೇಂದ್ರ ಚಿತ್ರ, ಶಿಲ್ಪ, ಕರಕುಶಲ ಶಾಲೆಗೆ ಸೇರಿದರು (1915). ರಾಜ ಸ್ಕೂಲಿನಲ್ಲಿದ್ದಾಗಲೇ ಕಪ್ಪೆಯ ಜೀವನ ವಿಕಾಸಕ್ಕೆ ಸಂಬಂಧಿಸಿದಂತೆ ಬರೆದ ರೇಖಾ ಚಿತ್ರವೊಂದಕ್ಕೆ ದಸರಾ ವಸ್ತು ಪ್ರದರ್ಶನದಲ್ಲಿ ಬೆಳ್ಳಿತಟ್ಟೆಯ ಬಹುಮಾನ ಬಂದಿತ್ತು (1914). ತಾತಂದಿರು ಮನೆಯಲ್ಲಿ ಬಿಡುವಿನ ವೇಳೆಯಲ್ಲಿ ಸಂಪ್ರದಾಯ ಚಿತ್ರಗಳನ್ನು ರಚಿಸುತ್ತಿದ್ದುದು ಪರಂಪರಾನುಗತವಾಗಿ ಕಲೆಯ ರಕ್ತ ಮೈಯಲ್ಲಿ ಸಂಚರಿಸುತ್ತಿದ್ದುದು, ನಾಗರಾಜು ಅವರಿಗೂ ಚಿತ್ರಕಲೆಯನ್ನೇ ತಮ್ಮ ಕ್ಷೇತ್ರವಾಗಿ ಆಯ್ದುಕೊಳ್ಳಬೇಕೆಂದು ಸಹಜವಾಗಿಯೇ ಅನಿಸಿರಬೇಕು.

ಆಗ ಚಾಮರಾಜೇಂದ್ರ ಶಾಲೆಗೆ ಪ್ರಿನ್ಸಿಪಾಲರಾಗಿದ್ದವರು ಹೆರಾಲ್ಡ್ .ಜಿ. ಆಲ್ಡರ್‌ಟನ್‌ರವರು, ರೇಖಾಚಿತ್ರಕ್ಕೆ ಆರ್.ಟಿ. ರಾಮಕೃಷ್ಣ ಅವರು, ಜ್ಯಾಮಿತಿಯ ಚಿತ್ರಕ್ಕೆ ಆರ್. ವೇಣುಗೋಪಾಲನಾಯ್ಡು ಅವರು, ಭಾವಚಿತ್ರಗಳಿಗೆ ಮೊದಲಿಗೆ ಕೆ. ಕೇಶವಯ್ಯ ಹಾಗೂ ನಂತರ ಆರ್.ವಿ. ನಾಯ್ಡು ಅವರು, ಸಂಯೋಜನ ಚಿತ್ರಗಳಿಗೆ ಎನ್.ಕೆ. ದೇವರ್ ಅವರು ಉಪಾಧ್ಯಾಯರುಗಳಾಗಿದ್ದರು. ಅಲ್ಲದೆ ಶಾಲೆಯಲ್ಲಿ ಇಂಗ್ಲಿಷ್ ಮತ್ತು

ಸಾಮಾನ್ಯ ಜ್ಞಾನದ ಶಿಕ್ಷಣವೂ ಇದ್ದು ಅವುಗಳನ್ನು ಶ್ರೀನಿವಾಸಮೂರ್ತಿ ಮತ್ತು ಎಂ. ಆಲಯ್ಯನವರುಗಳು ಬೋಧಿಸುತ್ತಿದ್ದರು. ಅಲ್ಲಿಯೇ ನಾಗರಾಜು ಅವರು ಐದು ವರ್ಷದ ಕೋರ್ಸ್ ಮುಗಿಸಿದರು. ಆಗ ಕರ್ನಾಟಕದ ಮೈಸೂರು ಪ್ರದೇಶದವರು ಮದ್ರಾಸ್‌ನ ಚಿತ್ರಕಲಾ ಪರೀಕ್ಷೆಗಳಿಗೂ, ಉತ್ತರ ಕರ್ನಾಟಕದವರು ಮುಂಬೈನ ಜೆ.ಜೆ. ಕಲಾಶಾಲೆಗೂ ಇಲ್ಲಿದ್ದುಕೊಂಡೇ ಅಂಚೆ ಮೂಲಕ ವಿದ್ಯಾಭ್ಯಾಸ ಮಾಡಿ ಪರೀಕ್ಷೆಗಳಿಗೆ ಕಟ್ಟಬಹುದಿತ್ತು. ಅಂತೆಯೇ ನಾಗರಾಜ್ ಅವರು ಮದ್ರಾಸ್ ಸರ್ಕಾರದ ಡ್ರಾಯಿಂಗ್, ಪೈಂಟಿಂಗ್, ಡಿಸೈನ್, ಜೆಮಿಟ್ರಿಕಲ್ ಡ್ರಾಯಿಂಗ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಡಿಪ್ಲೊಮಾ ಪದವೀಧರರಾದರು (1921). ಇದಲ್ಲದೆ ಚಾಮರಾಜೇಂದ್ರ ಶಾಲೆಯಲ್ಲಿಯೇ 1922ರ ವರೆಗೆ ಉನ್ನತ (ಅಡ್‌ವಾನ್ಸ್) ಚಿತ್ರಕಲೆ ಹಾಗೂ ಲಲಿತಕಲೆಯ ವರ್ಕ್‌ಶಾಪ್ ಪ್ರಾಕ್ಟೀಸ್ ಸಹ ಮಾಡಿದರು. ಈ ಸಂದರ್ಭದಲ್ಲಿ ಮಾಡಿದ ವಾಣಿಜ್ಯೋದ್ಯಮ ಕಲಾಕೃತಿಗಳು ಬ್ರಿಟಿಷ್ ಎಂಪೈರ್ ಪ್ರದರ್ಶನದಲ್ಲಿ ಪ್ರದರ್ಶಿತವಾದುವು (1924). ನಾಗರಾಜು ಅವರು ತಮ್ಮ ಕಲಾ ವಿದ್ಯಾಭ್ಯಾಸವನ್ನು ಪೂರೈಸಿದಾಗ ಆಲ್ಡರ್ ಟನ್‌ರವರು 'He is a heriditary artist of considerable abilities' ಎಂದು ಯೋಗ್ಯತಾ ಪತ್ರದಲ್ಲಿ ಬರೆದುಕೊಟ್ಟರು.

ಅರಮನೆ

ತಂದೆ ಯಲ್ಲಪ್ಪನವರು ಅರಮನೆಯಲ್ಲಿಯೇ ಇದ್ದುದು ಮಿರ್ಜಾ ಇಸ್ಮಾಯಿಲ್ ಅವರನ್ನು ಕಾಣುವುದು, ಅವರ ಬಳಿ ನಾಗರಾಜು ಅವರ ಚಿತ್ರಗಳನ್ನು ತೋರಿಸಿ ಮುಂದಿನ ಜೀವನೋಪಾಯಕ್ಕೆ ಸಲಹೆ ಕೇಳುವುದು ಕಷ್ಟವಾಗಲಿಲ್ಲ. ಮಿರ್ಜಾರವರು ಚಿತ್ರಕಲೆ ಹಾಗೂ ಕಲಾವಿದರ ಬಗ್ಗೆ ವಿಶೇಷವಾದ ಒಲವು ಇರಿಸಿಕೊಂಡಿದ್ದರು. ಸಾಹಿತಿ, ದಾರ್ಶನಿಕರಾಗಿದ್ದ ಡಿ.ವಿ.ಜಿ. ಅವರಿಗೆ ಬರೆಯುವ ಪತ್ರಗಳಲ್ಲಿ ಚಿತ್ರಕಲೆಯನ್ನು ಕುರಿತು ಚರ್ಚಿಸುತ್ತಿದ್ದರು. ದಿವಾನರಾಗುವ ಮೊದಲೇ ವೆಂಕಟಪ್ಪನವರನ್ನು ಪ್ರೋತ್ಸಾಹಿಸಿ ಅವರ ಕಲೆಯ ಬೆಳವಣಿಗೆಯಲ್ಲಿ ಉತ್ಸಾಹ ತೋರಿಸಿದ್ದವರು. ಅರಮನೆಯ ಸಂಬಂಧ ತಂದೆಗಿದ್ದರೂ ಮಗನಿಗೆ ಇರಲಿಲ್ಲ. ನಾಗರಾಜು ಅವರು ಚಾಮರಾಜ ಶಾಲೆಯಲ್ಲಿ ಕಲಿಯುತ್ತಿದ್ದಾಗ ಒಮ್ಮೆ ಯುವರಾಜರು ಬಂದು ಉಳಿದಂತೆ ಇವರ ಚಿತ್ರಗಳನ್ನು ನೋಡಿ ಮೆಚ್ಚಿಕೊಂಡಿದ್ದರು (1916).

ನಾಗರಾಜು ಅವರ ಪರಿಚಯ ಮಾಡಿಕೊಂಡ ಮಿರ್ಜಾರವರು ಅವರು ರಚಿಸಿದ ಚಿತ್ರಗಳನ್ನು ನಾಲ್ಮಡಿ ಕೃಷ್ಣರಾಜ ಒಡೆಯರಿಗೆ ತೋರಿಸಿದರು. ಮಹಾರಾಜರು ಅವುಗಳಲ್ಲಿ ಕೆಲವನ್ನು ಅರಮನೆಯಲ್ಲಿ ಇಟ್ಟುಕೊಳ್ಳಲು ಆರಿಸಿ, ನಗದು ಬಹುಮಾನಕ್ಕೆ ಅಪ್ಪಣೆ ಮಾಡಿದರು. ಕೆಲವೇ ದಿನಗಳಲ್ಲಿ (1-12-1922) ನಾಗರಾಜು ಅವರನ್ನು ಮೈಸೂರು ಅರಮನೆಯ ಚಿತ್ರಕಾರರಾಗಿ ನೇಮಿಸಿಕೊಂಡರು. ಆಗ ನಾಗರಾಜು ಅವರಿಗೆ ಕೇವಲ ಹದಿನೆಂಟು ವರ್ಷಗಳು. ಮುಂದೆ ಆಗಾಗ ರಾಜರ, ಅವರ ಪರಿವಾರದವರ ಭೇಟಿ ಆಗುತ್ತಿತ್ತು. ಮೈಸೂರಿನ ಡಾಲಿ ಅವಿನ್ಯೂ ರಸ್ತೆಯಲ್ಲಿ ಒಮ್ಮೆ ಚಿತ್ರ ಬಿಡಿಸುತ್ತಿದ್ದಾಗ ಕೃಷ್ಣರಾಜ ಒಡೆಯರಿಗೆ ಪ್ರಥಮ ಪರಿಚಯವಾಯಿತು. ಇನ್ನೊಮ್ಮೆ ಪ್ರಭುಗಳು ಬೇಸಿಗೆ ಅರಮನೆಯಲ್ಲಿ ಇವರು ರಚಿಸಿದ ತೈಲಚಿತ್ರಗಳನ್ನು ಖುದ್ದಾಗಿ ಪರಿಶೀಲಿಸಿದರು. ಈಗ ಅರಮನೆಯ ಉತ್ತರ ಭಾಗದಲ್ಲಿರುವ ಅಮೃತ ಶಿಲೆಯ ಮೆಟ್ಟಿಲುಗಳ ಹತ್ತಿರದ ಮಾಳಿಗೆಯಲ್ಲಿ ನಾಗರಾಜು ಅವರ ಸ್ಟುಡಿಯೋ ಇತ್ತು. ಒಮ್ಮೆ 7 × 10 ಅಡಿಯ ತೈಲ ಚಿತ್ರವೊಂದನ್ನು ಇವರೊಬ್ಬರೇ ನಿರ್ವಹಿಸುತ್ತಿದ್ದಾಗ ಮಹಾರಾಣಿ ಲಕ್ಷ್ಮಿವಿಲಾಸ ಸನ್ನಿಧಾನದವರು ಬಂದು ನೋಡಿ ಇಷ್ಟು ದೊಡ್ಡ ಚಿತ್ರವನ್ನು ಒಬ್ಬರೇ ಬರೆಯುತ್ತಿರುವ ಬಗ್ಗೆ ಆಶ್ಚರ್ಯಪಟ್ಟು ಬೇರೆ ಯಾರಾದರೊಬ್ಬರನ್ನು ಸಹಾಯಕ್ಕೆ ಇರಿಸಿಕೊಳ್ಳಬಾರದೇ ಎಂದು ಕೇಳಿದರಂತೆ. ಇನ್ನೊಮ್ಮೆ ಕೆಲ ಐರೋಪ್ಯ ಮಹಿಳೆಯರು ಇವರ ಚಿತ್ರಗಳನ್ನು ಕಂಡು "ಮಹಾರಾಜರು ನಿಮ್ಮಿಂದ ಅದ್ಭುತವಾದದ್ದನ್ನು ಸಾಧಿಸುತ್ತಿದ್ದಾರೆ" ಎಂದರಂತೆ, ಆಗ ನಾಗರಾಜು ಅವರು ನಮ್ರವಾಗಿ "ಎಲ್ಲ ಮಹಾರಾಜರ ಕೃಪೆ" ಎಂದು ಮಾರುತ್ತರ ನೀಡಿದರು. ನಾಗರಾಜು ಅವರು ಅರಮನೆಯ ಪೂಜಾಮಂದಿರದಲ್ಲಿ ಪೂಜೆಗೋಸ್ಕರ ಗಾಯತ್ರಿಯ ಚಿತ್ರವನ್ನು ತೈಲವರ್ಣದಲ್ಲಿ ರಚಿಸಿಕೊಟ್ಟರು. ಅದನ್ನು ಸಂಧ್ಯಾವಂದನೆಯ ಪುಸ್ತಕದಲ್ಲಿ ಮುದ್ರಿಸಿ ಅರಮನೆಯಲ್ಲಿ ಹಂಚಿದರು.

ರಾಜ, ಯುವರಾಜರುಗಳ, ರಾಣಿಯರ-ರಾಜಕುಮಾರಿಯರ, ರಾಜಪರಿವಾರದ, ಅಧಿಕಾರಿಗಳ ಅನೇಕ ಭಾವಚಿತ್ರಗಳನ್ನು ರೂಪದರ್ಶಿಯಾಗಿ ಎದುರಿಗೆ ಕುಳ್ಳಿರಿಸಿ ರಚಿಸಿದ್ದು ಹಾಗೂ ಮಹಾರಾಜರೇ ಕೆಲವು ಚಿತ್ರಗಳ ಬಗ್ಗೆ ನೇರವಾಗಿ ನಿರ್ದೇಶಿಸಿದ್ದು ರಾಜು ಅವರು ಆಸ್ಥಾನ

ಕಲಾವಿದರಾಗಿ ಅರಸರ, ಅರಮನೆಯ ವಿಶ್ವಾಸಕ್ಕೆ ಪಾತ್ರರಾಗಿದ್ದವರು ಎಂಬುದನ್ನು ಎತ್ತಿ ತೋರಿಸುತ್ತದೆ.

ವಿದೇಶ ಪ್ರಯಾಣ

ಹಳೆಯ ಮೈಸೂರು ಪ್ರಾಂತ್ಯದಿಂದ ವಿದೇಶಕ್ಕೆ ಹೊರಟ ಪ್ರಥಮ ಕಲಾವಿದರೆಂದರೆ ಪ್ರಾಯಶಃ ನಾಗರಾಜು ಅವರೇ. ಅದೂ ಅರಮನೆಯಿಂದ ಯುವರಾಜರೊಡನೆ ಹೋಗಿ ಬರುವ ಅವಕಾಶ ದೊರೆತದ್ದು ಅವರೊಬ್ಬರಿಗೆ ಮಾತ್ರ. ಚಾಮುಂಡಿ ವಿಹಾರ ಅರಮನೆಯಲ್ಲಿ ಒಮ್ಮೆ ಕಂಠೀರವ ನರಸಿಂಹರಾಜ ಒಡೆಯರ ಭಾವಚಿತ್ರವನ್ನು, ಅವರನ್ನು ರೂಪದರ್ಶಿಯಾಗಿ ಕುಳ್ಳಿರಿಸಿ ಚಿತ್ರಿಸುತ್ತಿದ್ದಾಗ, ನಾಗರಾಜು ಅವರಿಗೆ "ಫ್ರಾನ್ಸ್, ಇಂಗ್ಲೆಂಡ್ ಇತ್ಯಾದಿ ದೇಶಗಳಿಗೆ ಹೋಗಿ ಅಲ್ಲಿಯ ಚಿತ್ರಕಲಾ ಪ್ರದರ್ಶನಗಳು, ಕಲಾ ಸಂಗ್ರಹಾಲಯಗಳನ್ನು ನೋಡಿ ಬರಬಾರದೇ" ಎಂದು ಯುವರಾಜರು ಕೇಳಿದರಂತೆ ಆಗ "ಅಪ್ಪಣೆ ಆದರೆ ಆಗಬಹುದು" ಎಂದು ವಿನಮ್ರರಾಗಿ ಉತ್ತರಿಸಿದರು ರಾಜು ಅವರು. ಈ ಹಿಂದೆಯೇ ವೆಂಕಟಪ್ಪನವರು ವಿದೇಶಕ್ಕೆ ಹೋಗಲು ಇಷ್ಟಪಟ್ಟಿದ್ದರು. ಅರಮನೆಗೆ ತಮ್ಮ ಇಷ್ಟವನ್ನು ಹೇಳಿಯೂ ಇದ್ದರು. ಅರಮನೆಯೂ ಭಾಗಶಃ ಒಪ್ಪಿತ್ತು. ಆದರೆ ಎರಡನೇ ಮಹಾ ಯುದ್ಧದಿಂದಾಗಿ ತಪ್ಪಿಹೋಗಿತ್ತು. ಅವರೆಂದೂ ಹೋಗಲಿಲ್ಲ. ರಾಜು ಅವರು ಒಪ್ಪಿದ್ದು ಯುವರಾಜರು ಕೃಷ್ಣರಾಜ ಒಡೆಯರಲ್ಲಿ ಪ್ರಸ್ತಾಪಿಸಿದರು. ಯುವರಾಜರು ಆ ವೇಳೆಗೆ ಸಾಕಷ್ಟು ಸಲ ವಿದೇಶ ಪ್ರಯಾಣ ಮಾಡಿದ್ದರು. ಕೃಷ್ಣರಾಜ ಒಡೆಯರು ಉದ್ಯಮ, ವಿದ್ಯಾಭ್ಯಾಸ, ವಾಸ್ತುಶಿಲ್ಪ, ಆರ್ಥಿಕ ವ್ಯವಸ್ಥೆ ಇತ್ಯಾದಿ ಹಲವು ಕ್ಷೇತ್ರಗಳಲ್ಲಿ ಪ್ರಗತಿ, ಆಧುನಿಕತೆಗಳನ್ನು ತಂದು ಮೈಸೂರನ್ನು ಒಂದು ಆದರ್ಶ ರಾಜ್ಯವನ್ನಾಗಿಸಿದ್ದು ತಿಳಿದ ವಿಷಯವೇ ಆಗಿದೆ. ಅಂತೆಯೇ ಚಿತ್ರಕಲಾ ಕ್ಷೇತ್ರದಲ್ಲಿಯೂ ಆಗುತ್ತಿದ್ದ ಬದಲಾವಣೆಗಳನ್ನು ಗುರುತಿಸಿದ್ದರು. ನಾಗರಾಜು ಅವರನ್ನು ಕಳಿಸಲು ಒಪ್ಪಿದ್ದು, ಕಲಾವಿದರಾಗಿ ಅಲ್ಲ ಕಲಾ ನಿರೀಕ್ಷಕರಾಗಿ (as a Student) (1927). ನಾಗರಾಜುರವರು ಯುವರಾಜರೊಂದಿಗೆ ಬೊಂಬಾಯಿನಿಂದ 'ರಾಜಪುಟಾಣ' ಎಂಬ ಹಡಗಿನಲ್ಲಿ ಏಡನ್, ಸುಯಾಜ್, ಮಾರ್ಸಿಲೆಸ್‌ಗೆ ಹೋಗಿ, ಅಲ್ಲಿಂದ ರೈಲಿನಲ್ಲಿ ಪ್ಯಾರಿಸ್ಸಿಗೆ ಹೋದರು. ಅಲ್ಲಿ Le Salon Art exhibition; Lourve Museum

and Art Gallery; Lusem Bourge Art Museum; Varsaillas Museum; Pantheon ಹಾಗೂ ಕಲಾವಿದ ಲುಕಾರ್ತನ ಕಲಾ ಸ್ಟುಡಿಯೋಗಳನ್ನು ಸಂದರ್ಶಿಸಿದರು. ನಂತರ ಲಂಡನ್‌ಗೆ ಪ್ರಯಾಣಿಸಿದರು. ಅಲ್ಲಿ Royal Institute of Painters in Water Colour; Royal Academy Exhibition; National Art Gallery; Royal Society of Painters in Water Colour; Victoria and Albert Museum; Wallace Collection Art Gallery; Tata Art Gallery; National Portrait Gallery; Royal College of Art; Indian Museum; British Museum; Diploma Gallery ಇತ್ಯಾದಿಗಳನ್ನು ನೋಡಿದರು.

ಲಂಡನ್‌ನ ರಾಯಲ್ ಕಾಲೇಜ್ ಆಫ್ ಆರ್ಟ್ಸ್‌ನ ಪ್ರಿನ್ಸಿಪಾಲರಾಗಿದ್ದ ಎಂ. ವಿಲಿಯಂ ರೋತನ್ ಸ್ಟೋನ್‌ರವರನ್ನು ಭೇಟಿಯಾಗಿ ಕಾಲೇಜು ಸೇರಲು ಪ್ರಯತ್ನಿಸಿದ್ದು ಪ್ರವೇಶ ಪರೀಕ್ಷೆಯೂ ಆಯಿತು. ಪುರುಷನೊಬ್ಬ ನಿಂತ, ಸ್ತ್ರೀಯೊಬ್ಬಳು . ಕುಳಿತ ನ್ಯೂಡ್ ಸ್ಟಡಿಯ ಪೆನ್ಸಿಲ್ ರಚನೆಯನ್ನು ಪರೀಕ್ಷಾರ್ಥವಾಗಿ ನೀಡಿದರು. ತೃಪ್ತಿಕರವಾಗಿ ಮಾಡಿದ ಚಿತ್ರ ಕಂಡು ಕಾಲೇಜಿಗೆ ಸೇರಿಸಿಕೊಳ್ಳಲು ಪ್ರಿನ್ಸಿಪಾಲರು ಒಪ್ಪಿದ್ದರು. ಮೈಸೂರಿನಿಂದ "ನಾಗರಾಜು ಅವರು ಇಷ್ಟಪಟ್ಟಲ್ಲಿ ಹಾಗೂ ಯುವರಾಜರಿಗೆ ಅವಶ್ಯಕತೆಯಿದೆ ಎನಿಸಿದಲ್ಲಿ , ನಾಗರಾಜು ಅವರು ಲಂಡನ್‌ನಲ್ಲಿ ಚಿತ್ರಕಲಾ ವ್ಯಾಸಂಗ ಮಾಡಲು ಮಹಾರಾಜರ ಅಭ್ಯಂತರವೇನೂ ಇಲ್ಲ" ವೆಂದು ಯುವರಾಜರಿಗೆ ಕೇಬಲ್ ಕಳಿಸಿದರು. ಆದರೆ ಆ ವೇಳೆಗೆ ರಾಯಲ್ ಕಾಲೇಜಿಗೆ ಬೇಸಿಗೆಯ ರಜೆ ಬಂದಿತ್ತು. ನಾಗರಾಜು ಅವರಿಗೂ ಮರು ಪ್ರಯಾಣದ ಟಿಕೇಟು ತೆಗೆದಾಗಿತ್ತು. ಕೃಷ್ಣರಾಜ ಒಡೆಯರ ರಜತವರ್ಧಂತಿಯ ಉತ್ಸವವಿದ್ದು (1927) ಆ ವೇಳೆಗೆ ಮರಳಿ ಬಂದರು. ಮಹಾರಾಜರಿಗೆ ವರದಿ ಒಪ್ಪಿಸಿದರು. ಮಹಾರಾಜರಿಗೂ ಸಮಾಧಾನವಾಯಿತು. ಚಿತ್ರಕಲೆಯಲ್ಲಿ ಇನ್ನಷ್ಟು ಸಾಧಿಸಬಹುದೆಂಬ ನಂಬಿಕೆ, ಆತ್ಮ ವಿಶ್ವಾಸ ನಾಗರಾಜು ಅವರಿಗೆ ಬಂದಿತು.

ಸನ್ಮಾನ

ನಾಗರಾಜು ಅವರು ಇನ್ನೂ ರಾಜ ಸ್ಕೂಲ್‌ನಲ್ಲಿ ಇರುವಾಗಲೇ, ತಮ್ಮ ಹತ್ತನೇ ವರ್ಷದಲ್ಲೇ ದಸರಾ ಉತ್ಸವಕ್ಕೆ ಕೃತಿಯೊಂದನ್ನು ಕಳಿಸಿ ಬೆಳ್ಳಿ


ತಟ್ಟೆಯನ್ನು ಪಾರಿತೋಷಕವಾಗಿ ಸ್ವೀಕರಿಸಿದ್ದರು. 22-8-1965ರಲ್ಲಿ ಚಿತ್ರಕಲಾ ಪರಿಷತ್ತು ವಿಧಾನಸೌಧದಲ್ಲಿ ಸನ್ಮಾನಿಸಿ ಬಿನ್ನವತ್ತಳೆಯನ್ನು ಕೊಟ್ಟಿತು. ರಾಜ್ಯ ಲಲಿತ ಕಲಾ ಅಕಾಡೆಮಿಯವರು 1972ರಲ್ಲಿ ''ರೂಪ ಚಿತ್ರ ರಚನೆಯಲ್ಲಿ ನಾಗರಾಜು ಅವರು ದೊಡ್ಡ ಹೆಸರು ಮಾಡಿದ್ದಾರೆ. ಕಟ್ಟುನಿಟ್ಟಿನ ಸ್ವಚ್ಛ ಬಾಳನ್ನು ನಡೆಸಿದ ಹಿರಿಯ ಕಲಾವಿದರು'' ಎಂದು ಹೇಳಿ ಸನ್ಮಾನಿಸಿತು. ಶ್ರೀ ಸೋಮವಂಶ ಆರ್ಯ ಕ್ಷತ್ರಿಯರ ಸಮ್ಮೇಳನದಲ್ಲಿ 20-1-1973ರಂದು ನಾಗರಾಜು ಅವರನ್ನು ಸನ್ಮಾನಿಸಿತಲ್ಲದೆ 'ಚಿತ್ರಕಲಾ ಪ್ರವೀಣ' ಎಂಬ ಪ್ರಶಸ್ತಿಯಿತ್ತು ಗೌರವಿಸಿತು. ದರ್ಬಾರ್ ಹಾಲ್‌ನ ಸೀಲಿಂಗ್‌ನಲ್ಲಿ ಚಿತ್ರ ಬರೆಯಲು ಕರಡು ಪ್ರತಿಗಳ ಸ್ಪರ್ಧೆ ಇರಿಸಿದಾಗ ಇವರಿಗೂ ಒಂದು ಬಹುಮಾನ ಬಂತು. ಇನ್ನೊಮ್ಮೆ ಅರಮನೆ ಪೆನ್ಸಿಲ್ ಸ್ಕೆಚ್‌ಗೆ ರೂ. 150ಗಳ ಪಾರಿತೋಷಕ ಬಂದಿತು.

ಡಿಪ್ಲೊಮಾ ಓದುತ್ತಿದ್ದಾಗ ರಚಿಸಿದ ಚಿತ್ರಗಳನ್ನು ಕಂಡು ಮಹಾರಾಜರು ಅವುಗಳಲ್ಲಿ ಕೆಲವನ್ನು ಆಯ್ಕೆಮಾಡಿ ಪಡೆದುಕೊಂಡು ಸಂಭಾವನೆ ಅನುಗ್ರಹಿಸಿದ್ದರು. ನಂತರ ಅರಮನೆಯ ಗೌರವ ಕಲಾವಿದರಾಗಿ, ಆಯ್ಕೆಯಾದ ಮೇಲೆ ರಾಜ ಪರಿವಾರದವರ ತೈಲ ಚಿತ್ರಗಳನ್ನು ಬರೆಯತಿಳಿಸಿ ಪ್ರತಿ ಚಿತ್ರಗಳಿಗೆ ನೂರು ರೂಪಾಯಿ ಸಂಭಾವನೆ ಕೊಡುತ್ತಿದ್ದರು. ಮೂರು ಹಾಗೂ ಐದು ಅಡಿ ಅಳತೆಯ ಚಿತ್ರಗಳಿಗೆ ಐನೂರು ರೂಪಾಯಿಗಳ ತನಕ ಮಜೂರಿ ದೊರೆಯುತ್ತಿತ್ತು. ವಿದೇಶಕ್ಕೆ ಹೋದಾಗ ವಿದ್ಯಾರ್ಥಿವೇತನವೆಂಬತೆ ಮಾಹೆಯಾನ ಇನ್ನೂರ ಐವತ್ತು ರೂಪಾಯಿಗಳು ನೀಡಲಾಯಿತು. ಸುಪ್ರಸಿದ್ಧ ದಸರಾ ಮೆರವಣಿಗೆಯ ಚಿತ್ರಗಳಿಗೆ ದೊಡ್ಡವಕ್ಕೆ ಸಾವಿರ ಹಾಗೂ ಚಿಕ್ಕವಕ್ಕೆ ಮುನ್ನೂರು ರೂಪಾಯಿಗಳಂತೆ ಸ್ವೀಕರಿಸಿದರು. ಮಹಾರಾಜ, ಮಹಾರಾಣಿಯವರು ಕೆಲವೊಮ್ಮೆ ಇವರ ಚಿತ್ರಗಳನ್ನು ಕಂಡು ಸಂತೋಷದಿಂದ ಬಹುಮಾನಿಸಿದ್ದುಂಟು. ವಿಶ್ವೇಶ್ವರಯ್ಯ ಅವರ ಚಿತ್ರ ರಚಿಸಿದಾಗಲೂ ಅವರು ಧನರೂಪದಲ್ಲಿ ಬಹುಮಾನಿಸಿದರು. ಉಳಿದವರಂತೆ 1957ರಲ್ಲಿ ಅರಮನೆಯಿಂದ ನಿವೃತ್ತಿಗೊಳಿಸಿದಾಗ, ಅದುವರೆಗೆ ಬರುತ್ತಿದ್ದ ಮಾಹೆಯಾನ ಐವತ್ತು ರೂಪಾಯಿಗಳ ಮರ್ಯಾದೆ ನಿಂತುಹೋಯಿತು.

ಸಂಸಾರ

ನಾಗರಾಜು ಅವರ ವೈಯಕ್ತಿಕ ವಿಷಯ ತಿಳಿದುಬರುವುದು ಕಡಿಮೆ. ಕಾರಣ ಅವರು ಮಿತಭಾಷಿ ಹಾಗೂ ಇಡೀ ಜೀವನವನ್ನು ಕಲೆಗೆ ತೊಡಗಿಸಿಕೊಂಡವರು. ಮೊದಲು ಅರಮನೆಯಲ್ಲಿ ನಂತರ ಉದರ ನಿರ್ವಹಣೆಗೆ ಸ್ಟುಡಿಯೋದಲ್ಲಿ ನಿರಂತರವಾಗಿ ಚಿತ್ರಿಸುತ್ತಿದ್ದ ಅವರು ಕಾಲವನ್ನು ಸುಮ್ಮನೆ ವ್ಯಯ ಮಾಡುತ್ತಿರಲಿಲ್ಲ . ಹಾಗಾಗಿ ಗೆಳೆಯರು, ಆಪ್ತರು ತೀರಾ ಕಡಿಮೆ. ಓದುತ್ತಿದ್ದಾಗಲು ಸಂಜೆಯ ವೇಳೆಯಲ್ಲಿ ಕಲಾ ಕೇಶವಯ್ಯನವರ ಮನೆಯಲ್ಲಿ ಭಾವಚಿತ್ರ ಇತ್ಯಾದಿಗಳನ್ನು ರಚಿಸುತ್ತಿದ್ದರು. ಅದಕ್ಕೂ ಮೊದಲು ತಾತ, ತಂದೆಯವರೊಂದಿಗೆ ಸಾಂಪ್ರದಾಯಿಕ ಚಿತ್ರಗಳನ್ನು ಬಿಡುವಿನ ವೇಳೆಯಲ್ಲಿ ಮಾಡುತ್ತಿದ್ದರು. ಜೀವನದ ಕೊನೆಯವರೆಗೂ ಅವರ ಕೈ ಕುಂಚವನ್ನು ಹಿಡಿದೇ ಇತ್ತು. ನಿಧನರಾದ ದಿನದಂದೂ (2-8-1979) ಸಹ ಸ್ಟುಡಿಯೋವಿಗೆ ಚಿತ್ರವೊಂದನ್ನು ವಿಸ್ತರಿಸಿ ಬಣ್ಣ ತುಂಬಲು ತಂದಿದ್ದರು. ಮನೆಯ ಬಳಿಯಲ್ಲಿಯೇ ಕುಸಿದು ಬಿದ್ದ ಅವರು ಅಂದೇ ನಿಧನರಾದರು.

ಅರಮನೆಗೆ ಸೇರಿದ ತರುಣದಲ್ಲಿಯೇ ಅವರಿಗೆ ಬೆಂಗಳೂರಿನ ಶ್ರೀಮತಿ ಗೌರಮ್ಮನವರೊಂದಿಗೆ ವಿವಾಹವಾಯಿತು. ಎರಡು ಗಂಡು ಹಾಗೂ ಮೂರು ಹೆಣ್ಣು ಮಕ್ಕಳಿಗೆ ಜನ್ಮನೀಡಿ ಅವರು ತೀರಿಕೊಂಡರು. ನಂತರ ಶ್ರೀಮತಿ ಕಮಲಮ್ಮನವರೊಂದಿಗೆ ವಿವಾಹವಾಯಿತು. ಅವರೂ ಸಹ ಎರಡು ಗಂಡು ಮತ್ತು ಮೂರು ಹೆಣ್ಣು ಮಕ್ಕಳಿಗೆ ಜನ್ಮನೀಡಿದರು. ಮಕ್ಕಳು ಚಿತ್ರಕಲೆಯನ್ನೇ ತಮ್ಮಕ್ಷೇತ್ರವಾಗಿ ಆಯ್ಕೆ ಮಾಡಿಕೊಳ್ಳದಿದ್ದರೂ ಕೆಲವರಿಗಾದರೂ ಕಲೆಯಲ್ಲಿ ಅಭಿರುಚಿ ಆಸಕ್ತಿ ಮೂಡಿಬಂದಿದೆ. ಕರ್ನಾಟಕ ವಿದ್ಯುತ್ ನಿಗಮದಲ್ಲಿರುವ ಒಬ್ಬ ಪುತ್ರ ಶ್ರೀ ಸುಬ್ರಮಣ್ಯರಾಜು ಅವರು ಪ್ರಸ್ತುತ ಲೇಖನಕ್ಕಾಗಿ ಸಾಕಷ್ಟು ಮಾಹಿತಿ ನೀಡಿದರು. ಹಿರಿಯ ಮಗ ಶ್ರೀ ಜಯಸುಂದರರಾಜರವರು ರಾಣೆ ಬೆನ್ನೂರಿನಲ್ಲಿರುವ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದಾರೆ. ಇನ್ನೊಬ್ಬ ಪುತ್ರ ಶ್ರೀ ರಾಜ್ಯ ಕಾಮಗಾರಿ ಇಲಾಖೆಯಲ್ಲಿರುವ ಶ್ರೀ ಶಂಕರರಾಜು ಅವರು ಮೈಸೂರಿನಲ್ಲಿ ತಂದೆಯವರಿದ್ದ ಮನೆಯಲ್ಲೆ ಇದ್ದು ಅವರ ಕೆಲವು ಅಮೂಲ್ಯ ಕೃತಿಗಳ ರಕ್ಷಣೆ ಮಾಡುತ್ತಿದ್ದಾರೆ. ನಾಗರಾಜು ಅವರ ಸಹೋದರ



ಮೈಸೂರಿನ ರಾಜವಂಶದ
ಕೊನೆಯ ನಾಲ್ಕು ಜನ ರಾಜರುಗಳು

The last Four Rulers of Mysore



ಯಲ್ಲಪ್ಪ
ವೈ. ನಾಗರಾಜು ಅವರ ತಂದೆ

Yellappa
Father of Y.Nagaraju



ಕೃಷ್ಣಮ್ಮ
ವೈ. ನಾಗರಾಜು ಅವರ ತಾಯಿ

Krishnamma
Mother of Y.Nagaraju




ಮಗಳು

Daughter



Devi



ಸುತ್ತೂರು ವೀರಸಿಂಹಾಸನದ ಆದಿಶ್ರೀ ಗುರು ಶಿವರಾತ್ರೀಶ್ವರ ಸ್ವಾಮಿಗಳು

"Suturu Veerasimhasanada Adi Shriguru Shivaratreshwara Swamigalu"



ಲಲಿತಕಲಾ ಅಕಾಡೆಮಿ ಪ್ರಶಸ್ತಿಯನ್ನು ಶ್ರೀ ಎ. ಆರ್. ಭಾದರಿ ನಾರಾಯಣ ಅವರಿಂದ ಸ್ವೀಕರಿಸುತ್ತಿರುವುದು.

Receiving Lalithakala Academy award from Shri R. Bhadhari-narayan.

ಶ್ರೀ ಸುಬ್ರಮಣ್ಯರಾಜು ಅವರು ಅಣ್ಣನ ಜೊತೆಯಲ್ಲೇ ಇದ್ದವರು, ನಾಗರಾಜು ಅವರಿಗೆ ಬಹುಮಾನವೊಂದು ಬಂದಾಗ ಅದರ ಸ್ಫೂರ್ತಿಯಿಂದ ಸುಬ್ರಮಣ್ಯರಾಜು ಅವರೂ ಸ್ಪರ್ಧೆಯೊಂದಕ್ಕೆ ಕೃತಿಯನ್ನು ಕಳಿಸಿ ಬಹುಮಾನ ಪಡೆದರು. ಕೇಶವಯ್ಯನವರ ಕಲಾಗಾರದಲ್ಲಿ ಅಣ್ಣನೊಂದಿಗೆ ಚಿತ್ರಕಲೆ ಅಭ್ಯಸಿಸಿ ಮುಂದೆ ತಮ್ಮ ಸ್ವಂತಿಕೆ ಕಂಡುಕೊಂಡವರು. ನಾಗರಾಜು ಅವರ ಕಲಾಕೃತಿಗಳ ಬಗ್ಗೆ ಆದರ ಗೌರವ ಇರಿಸಿರುವ ಸುಬ್ರಮಣ್ಯರಾಜು ಅವರೂ ಸಾಕಷ್ಟು ಮಾಹಿತಿ ನೀಡಿದ್ದಲ್ಲದೆ ತಾವು ಮಾಡಿರಿಸಿಕೊಂಡಿದ್ದ ಟಿಪ್ಪಣಿಯನ್ನೇ ನೀಡಿದರು. ಗಂಡು ಮಕ್ಕಳಲ್ಲಿ ಇಬ್ಬರು ಬಿ.ಇ. ಆದರೆ, ಒಬ್ಬರು ಎಂ. ಟೆಕ್ ಹಾಗೂ ಇನ್ನೊಬ್ಬರು ಎಂ.ಎಸ್ಸಿ, ಒಬ್ಬ ಮಗ ಚಂದ್ರಶೇಖರರಾಜು ಈಗಿಲ್ಲವಾದರೂ ಎಲ್ಲರೂ ಉನ್ನತ ಹುದ್ದೆಯಲ್ಲಿರುವವರೇ ಆಗಿದ್ದಾರೆ.

ನಾಗರಾಜು ಅವರು ಚಿತ್ರಕಲೆಯಲ್ಲಿ ತೋರುತ್ತಿದ್ದಂತಹ ಶ್ರದ್ಧೆ, ಭಕ್ತಿ, ಕ್ರಮಬದ್ಧತೆಗಳನ್ನು ತಮ್ಮ ಜೀವನದಲ್ಲಿಯೂ ಅಳವಡಿಸಿಕೊಂಡಿದ್ದರು. ಪ್ರತಿದಿನ ಬೆಳಿಗ್ಗೆ ಸಂಧ್ಯಾವಂದನೆ, ದೇವರಪೂಜೆ ಮಾಡಿ ನಂತರ ಕೆಲಸ ಪ್ರಾರಂಭಿಸುತ್ತಿದ್ದರು. ಅರಮನೆಯ ಖಾಸಾ ಉಡುಪು ಉದ್ದನೆಯ ಕೋಟು, ನಂತರ ಸೂಟು ಧರಿಸುತ್ತಿದ್ದರು. ಮೈಸೂರು ಪೇಟ ಕೊನೆಯವರೆಗೂ ಅವರ ಸಂಗಾತಿಯಾಗಿತ್ತು.

ಕೃತಿಗಳು

ನಾಗರಾಜು ಅವರ ಕಾಲ ಕೃತಿಗಳನ್ನು ಲೆಕ್ಕ ಇಡುವ ಕಾಲವೇ ಆಗಿರಲಿಲ್ಲ. ಅಥವಾ ಮಾಡಿ ಕೃತಿಗಳನ್ನು ದಾಖಲಿಸಬೇಕೆಂಬ ಇರಾದೆಯೂ ಇರಲ್ಲಿಲ್ಲ. ಸ್ವಂತವಾಗಿ ಸೃಜನಶೀಲವಾಗಿ ಕೃತಿಗಳನ್ನು ರಚಿಸಿದ್ದರೂ ಹೆಚ್ಚಿನವು ಬೇಡಿಕೆಗಾಗಿ ಮಾಡಿದವು. ಸ್ವತಃ ಕಲಾವಿದರೇ ತಾವು ರಚಿಸಿದ ಕೆಲವು ಕೃತಿಗಳ ಪಟ್ಟಿಯನ್ನು ಮಾಡಿದ್ದಾರಾದರೂ ಅದು ತೀರ ಅಪೂರ್ಣ.

ಅರಮನೆ, ಮ್ಯೂಸಿಯಂ, ಶಾಲಾ ಕಾಲೇಜು ಇತ್ಯಾದಿ ಸಾರ್ವಜನಿಕ ಸ್ಥಳಗಳಲ್ಲಿ ದೊರೆಯುವ ಕೃತಿಗಳನ್ನು ಸೇರಿಸಿ ಸ್ಥೂಲವಾಗಿ ರಾಜು ಅವರು ರಚಿಸಿದ ಕೃತಿಗಳನ್ನು ನೋಡಬಹುದು. ಅರಮನೆಗೆ ಪರಿಚಯವಾಗುವುದಕ್ಕೆ ಮೊದಲಿನ ಕೃತಿಗಳ ವಿಷಯ ತಿಳಿದು ಬರುವುದಿಲ್ಲ. ಮಿರ್ಜಾಇಸ್ಮಾಯಿಲ್ ಅವರ ಮೂಲಕ ಕೆಲವು ಜಲವರ್ಣದ ಚಿತ್ರಗಳನ್ನು (ಬಹುಶಃ ಭೂದೃಶ್ಯಗಳು)

ಮಹಾರಾಜರಿಗೆ ಕಳಿಸಿದ ವಿಷಯ ಈ ಹಿಂದೆ ಬಂದಿದೆ (ಅವುಗಳು ಈಗೆಲ್ಲಿವೆಯೋ ತಿಳಿಯದು). ಅವುಗಳನ್ನೆಲ್ಲಾ ನೋಡಿ, ಕೆಲವನ್ನು ಪಡೆದ ಮಹಾರಾಜರು ಮೈಸೂರಿನ ಡಾಲಿ ಅವೆನ್ಯೂ ಹಾಗೂ ಆಲ್‌ಬರ್ಟ್ ವಿಕ್ಟರ್ ರಸ್ತೆಗಳ ದೃಶ್ಯವನ್ನು ಹೇಳಿ ಬರೆಯಿಸಿ ಪಡೆದುಕೊಂಡರು. ಈ ವೇಳೆಗೆ ಪ್ರಾಯಶಃ ನಾಗರಾಜು ಅವರು ಭಾವಚಿತ್ರ ರಚನೆಯಲ್ಲಿ ಸಿದ್ಧಿಯನ್ನು ಪಡೆದಂತೆ ಕಂಡು ಬರುತ್ತದೆ. ಹುಜೂರು ಕಾಂದಾರ್ ಎಂ.ಪಿ. ಸುಬ್ರಮಣ್ಯರಾಜೇ ಅರಸು ರಚಿಸಿದ್ದು ಅವನ್ನು ಪ್ರಭುಗಳು ನೋಡಿ ಪುಟ್ಟ ಭಕ್ಷಿಯವರ ಚಿತ್ರ, ದೇಶಮುಖ್ ಶ್ಯಾಮರಾವ್, ಸಡಗ್-ಚಡ್-ಪಾ, ಕ್ಯಾಪ್ಟನ್ ನಬಿ ಖಾನ್ ಮೊದಲಾದವರ ಭಾವಚಿತ್ರಗಳನ್ನು ಬರೆಯಿಸಿಕೊಂಡರು. ಇವುಗಳು 20 × 30 ಇಂಚು ಅಳತೆಯದಾದರೆ ಇದೇ ವೇಳೆಗೆ ಮಹಾರಾಜರ ಸಹೋದರಿ ಅವರ ಚಿತ್ರವನ್ನು 3 × 5 ಅಡಿಗಳ ಪ್ರಮಾಣದಲ್ಲಿ ರಚಿಸಿದರು. ಮಿರ್ಜಾರವರ ಚಿತ್ರ (5 × 3 ಅಡಿ) ರಚಿಸಿದ್ದು ನೀಲಗಿರಿ ಅರಮನೆಯಲ್ಲಿದೆ.

ಪ್ರಾಚೀನ ಭಾರತೀಯ ಶಾಸ್ತ್ರಗ್ರಂಥಗಳಲ್ಲಿ 'ಚಿತ್ರ ಭಿತ್ತಿ ನ್ಯಾಯ' ಎಂಬ ಸಿದ್ಧಾಂತವೊಂದು ಬರುತ್ತದೆ. ಚಿತ್ರಕಲೆಯಲ್ಲಿ ಮಾತ್ರ ಮೂರು ಲೋಕಗಳು ಒಂದಾಗುವ ಭೂತ, ಭವಿಷ್ಯ, ವರ್ತಮಾನ ಕಾಲಗಳು ಒಂದೇ ಫಲಕದ ಮೇಲೆ ಮೂಡಬಹುದಾದ ಸಾಧ್ಯತೆ ಇಲ್ಲಿ ಮಾತ್ರ ಸಾಧ್ಯ ಎಂದು ವ್ಯಾಖ್ಯಾನಿಸಲಾಗಿದೆ. ಪಾಶ್ಚಾತ್ಯರಲ್ಲೂ ಇಂತಹ ಚಿತ್ರಗಳಿಗೆ ಕಾಲ ವಿಪರ್ಯಾಸದ ಚಿತ್ರ (Anachronism) ಎಂದು ಕರೆದಿದೆ. ಅಂತೆಯೇ 1926ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಇಚ್ಛೆಯಂತೆ ಅವರೂ ಸೇರಿದಂತೆ ಯುವರಾಜ ಕಂಠೀರವ ನರಸಿಂಹರಾಜರು, ರಾಜಕುಮಾರ ಜಯಚಾಮರಾಜ ಒಡೆಯರು ಹಿನ್ನೆಲೆಯಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಇರುವಂತೆ ಚಿತ್ರವನ್ನು ಸಂಯೋಜಿಸಿಕೊಟ್ಟರು. ಚರಿತ್ರೆ ಬಲ್ಲವರಿಗೆ ನಾಲ್ವರೂ ಬೇರೆ ಬೇರೆ ಕಾಲದವರೆಂದು ತಿಳಿದೇ ಇದೆ. ಇದಕ್ಕೆ 'ನಾಲ್ಕು ತಲೆಮಾರಿನ ಚಿತ್ರ' ಎಂದೇ ಹೆಸರಿಸಿ ಮೈಸೂರಿನ ದರ್ಬಾರ್ ಹಾಲಿನಲ್ಲಿ ಪ್ರದರ್ಶಿಸಿದೆ. ಚಾಮುಂಡಿ ಬೆಟ್ಟದ ಮೇಲಿರುವ ಚಾಮುಂಡೇಶ್ವರಿಯ ಛಾಯಾಚಿತ್ರ ತೆಗೆಯುವಂತಿಲ್ಲವಾದ ಕಾರಣ ನಾಗರಾಜು ಅವರಿಗಾಗಿ ಮೂಲ ಶಿಲ್ಪವನ್ನು ಕೆಲಹೊತ್ತು ಪರೀಕ್ಷಿಸಿ ನೋಡುವ ಅವಕಾಶ ದೊರೆಯಿತು. ಮನಸ್ಸಿನಲ್ಲಿ

ಪೂರ್ತಿಯಾಗಿ ಪ್ರತಿಮೆಯನ್ನು ಮೂಡಿಸಿಕೊಂಡು ಬಂದು ಚಿತ್ರ ರಚಿಸಿದರು. ಸಪ್ತಮಾತೃಕೆಯರಲ್ಲಿ ಒಬ್ಬಳಾದ ಚಾಮುಂಡಿದೇವಿ ಪೀಠದ ಮೇಲೆ ಒಂದು ಕಾಲಿರಿಸಿ ಇನ್ನೊಂದು ಕಾಲನ್ನು ಕೆಳಗೆ ಇಳಿಬಿಟ್ಟು, ಎಂಟು ಕೈಗಳಲ್ಲಿ ಎಂಟು ಆಯುಧಗಳನ್ನು ಹಿಡಿದು ಹಿತಮಿತ ಅಲಂಕಾರದೊಡನೆ ಕುಳಿತಂತೆ ಚಿತ್ರಿಸಿದೆ. ಇಡೀ ಫಲಕದ ಕೆಳಬದಿಯಲ್ಲಿ ಚಾಮುಂಡಿಬೆಟ್ಟ, ಮುಂದೆ ಕೆರೆ, ಬೆಟ್ಟಕ್ಕೆ ಹೋಗುವ ಹಾದಿ, ದೇವಾಲಯ, ಮರ ಗಿಡ, ಮುಸ್ಸಂಜೆಯ ಹೊತ್ತು, ದಾರಿಯಲ್ಲಿ ಮತ್ತು ಬೆಟ್ಟದ ಮೇಲೆ ಆಗಸದಲ್ಲಿ ದೇವಿ ಇರುವಂತೆ ಒಟ್ಟು ಚಿತ್ರವನ್ನು ಸಂಯೋಜಿಸಿದೆ. ವಿದೇಶದಿಂದ ಬಂದ ಮೇಲೆ ಕರ್ನಲ್ ಮೆಗ್ಗನ್ ಮತ್ತು ಆತನ ಪತ್ನಿಯ ಚಿತ್ರ ಹಾಗೂ ಈಗ ಬೇಸಿಗೆ ಅರಮನೆಯಲ್ಲಿರುವ ಯುವರಾಜರು ತಮ್ಮಮೂವರು ಮಕ್ಕಳೊಂದಿಗೆ ಇರುವ ಚಿತ್ರ ರಚಿಸಿದರು.

ಅರಮನೆಯ ಕಲ್ಯಾಣ ಮಂಟಪದಲ್ಲಿ ದಸರಾ ಮೆರವಣಿಗೆಯ ಚಿತ್ರಗಳ ಕಲ್ಪನೆ 1930ರಲ್ಲಿ ಆದದ್ದು. ಸುಬ್ರಮಣ್ಯರಾಜು ಅವರೇ ಎಲ್ಲ ಚಿತ್ರಗಳ ಮೂಲ ಹೊಳಹು ನಕ್ಷೆಗಳನ್ನು ಹಾಕಿದರು. ಕ್ಯಾನ್‌ವಾಸ್ ಮೇಲೆ ರಚಿಸಿ ಗೋಡೆಗೆ ಹಬ್ಬಿಸಿರುವ ಈ ಚಿತ್ರಗಳಲ್ಲಿ ದೊಡ್ಡವು $13 \times 7^{1}/_{2}$ ಅಡಿಗಳಷ್ಟಾದರೆ ಬಾಗಿಲುಗಳ ಮೇಲೆ ಹಾಗೂ ಪಕ್ಕಗಳಲ್ಲಿ ಇರುವ ಫಲಕಗಳು ಚಿಕ್ಕವು. ಮೊದಲಿಗೆ ಕೆ. ಕೇಶವಯ್ಯ, ನಾಗರಾಜು, ಸುಬ್ರಮಣ್ಯ ರಾಜು, ಎಸ್. ಶಂಕರರಾಜು ಅವರುಗಳು ಆರಂಭಿಸಿದರೂ ಕೊನೆಗೆ ಎಸ್. ನಂಜುಡಸ್ವಾಮಿ, ಎಸ್. ನರಸಿಂಹಸ್ವಾಮಿ ಹಾಗೂ ಎಸ್.ಆರ್. ಅಯ್ಯಂಗಾರ್ ಅವರುಗಳೂ ಸೇರಿಕೊಂಡರು. ನಾಗರಾಜು ಅವರು ಎರಡು ದೊಡ್ಡ ಹಾಗೂ ಮೂರು ಚಿಕ್ಕ ಅಂಕಣಗಳನ್ನು ಮಾಡಿದ್ದರು. ಮೈಸೂರು ಇನ್‌ಫೆಂಟ್ರಿಯ ಮೊದಲ ಬೆಟಾಲಿಯನ್ ಮತ್ತು ಕೃಷ್ಣರಾಜ, ನರಸಿಂಹರಾಜ, ಜಯಚಾಮರಾಜರು ಕುದುರೆ ಮೇಲೆ ಕುಳಿತು ಬರುತ್ತಿರುವ ಚಿತ್ರಗಳು ಪೂರ್ಣ ಪ್ರಮಾಣದವು. ಎತ್ತಿನಗಾಡಿ, ನಗಾರಿ, ಡಿ.ಸಿ. ಮತ್ತು ಮುನ್ಸಿಪಲ್ ಕಮಿಶನರು ಹಾಗೂ ಕುಂಬ್ಮಿಯ ಆನೆಯ ಚಿತ್ರಗಳು ಚಿಕ್ಕ ಅಂಕಣಗಳು. ಎಲ್ಲ ಕಲಾವಿದರ ಒಟ್ಟು 28 ಚಿತ್ರಗಳು ಸುಮಾರು 1933ರಲ್ಲಿ ಆರಂಭವಾಗಿ ಪೂರೈಸಲು ಹತ್ತು ವರ್ಷಗಳ ಕಾಲ ತೆಗೆದುಕೊಂಡಿತು. ಜಗನ್ಮೋಹನ ಶಾಲೆಯಲ್ಲಿ ರಚಿಸಿ ನಂತರ ಕಲ್ಯಾಣ ಮಂಟದಲ್ಲಿ ಗೋಡೆಗೆ ಹೊಂದಿಸಲಾಯಿತು. ಚಾಮುಂಡೇಶ್ವರಿ ರಥೋತ್ಸವ 29ನೇ ಅಂಕಣವಾಗಿದ್ದು

ಅದು ನಾಗರಾಜು ಅವರ ಕೃತಿಯಾಗಿದೆ. ನಾಗರಾಜು ಅವರಿಗೆ ಹೆಸರು ತಂದ ಇನ್ನೊಂದು ಸಂಜೋಜಿತ ಚಿತ್ರವೆಂದರೆ 1933ರಲ್ಲಿ ಮಾಡಿದ 'ಸುವರ್ಣ ಸಿಂಹಾಸನದಲ್ಲಿ ವಿರಾಜಮಾನರಾದ ಮಹಾರಾಜರು'. ಹಸನ್ಮುಖಿಗಳಾಗಿ ಸಿಂಹಾಸನದಲ್ಲಿ ಮಂಡಿಸಿರುವ ಮಹಾರಾಜರನ್ನು ಪ್ರಮುಖವಾಗಿರಿಸಿ ಹಿನ್ನೆಲೆಗೆ ವಿಶಾಲವಾದ ಅರಮನೆ ದರ್ಬಾರು ದೃಶ್ಯ, ಸಮಕಾಲೀನ ಪ್ರಮುಖರು, ಉಚಿತ ವಸ್ತ್ರಾಭರಣಗಳಲ್ಲಿ ಇರುವಂತೆ ರೂಪಿಸಿರುವ ಬೃಹತ್ ಪ್ರಮಾಣದ ತೈಲ ಚಿತ್ರದಲ್ಲಿ ನಾಗರಾಜು ಅವರ ಕಲಾತ್ಮಕತೆ, ನಿರ್ವಹಣೆಯ ರೀತಿಗಳನ್ನು ಕಾಣಬಹುದು. ದಸರಾ ಪ್ರದರ್ಶನಕ್ಕೆ ರಚಿಸಿದ ಸುಮಾರು 12 ಅಡಿ ಎತ್ತರದ ಗಾಂಧೀಜಿಯವರ ಚಿತ್ರ, ಆರೇಳು ವರ್ಷಗಳ ಕಾಲ ಪ್ರಮುಖವಾದ ಸ್ಥಳಗಳಲ್ಲಿ ಪ್ರದರ್ಶಿಸಿದ್ದು, ಸಾಕಷ್ಟು ಜನರನ್ನು ಆಕರ್ಷಿಸಿತ್ತು. ಬಿಡುವಿಲ್ಲದ ವ್ಯಕ್ತಿಯಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರನ್ನು ಒಂದೆಡೆ ರೂಪದರ್ಶಿಯಾಗಿ ಕುಳ್ಳಿರಿಸಿದವರೆಂದರೆ ನಾಗರಾಜುರವರೆಂದೇ ತೋರುತ್ತದೆ. ಅಂತಿಮ ರೂಪುರೇಷೆಗಾಗಿ ಎಂ.ವಿ. ಯವರನ್ನು ಕೂರಿಸಿ ಚಿತ್ರ ಬರೆದು ಅವರ ಆಶೀರ್ವಾದ ಬೇಡಿದ ಕಲಾವಿದನಿಗೆ ಆಶೀರ್ವಾದದ ಜೊತೆಗೆ ಸಂಭಾವನೆಯೂ ದೊರೆಯಿತು. ಎಂ.ವಿ. ಅವರ ಸಹಿಯೊಂದಿಗೆ ಇರುವ ಈ ಚಿತ್ರ ಈಗ ಬೆಂಗಳೂರಿನ ಬಿ.ಎಂ.ಎಸ್. ತಾಂತ್ರಿಕ ಕಾಲೇಜಿನಲ್ಲಿದೆ. ಅದೇ ಕಾಲೇಜು ಸಂಸ್ಥಾಪಕರಾದ ಬಿ.ಎಂ. ಶ್ರೀನಿವಾಸಯ್ಯ ಅವರ ಚಿತ್ರವೂ ನಾಗರಾಜು ಅವರು ರಚಿಸಿದ್ದು ಅದೂ ಅಲ್ಲೇ ಇದೆ. ಮೈಸೂರಿನ ರಂಗಾಚಾರ್ಯ ಪುರಭವನದ ರಂಗಭೂಮಿಯ ಮೇಲೆ 15 × 15 ಅಡಿ ಅಳತೆಯ ವಿಶಾಲ ಸಂಯೋಜಿತ ಚಿತ್ರ ಮೊದಲಿಗೆ ನಾಗರಾಜು ಅವರು ರಚಿಸಿದ್ದು ; ಮಧ್ಯೆ ಭಾರತದ ಭೂಪಟದಲ್ಲಿ ಭಾರತಾಂಬೆ ಅಭಯ ಹಸ್ತೆಯಾಗಿ ನಿಂತಿದ್ದಾಳೆ. ಆಕೆಯ ಬಲಕ್ಕೆ ಸಂಗೀತ ಮೇಳ, ವಯೋಲಿನ್ ತಂಬೂರಿ, ವೀಣೆ ಇತ್ಯಾದಿ ವಾದಕರು, ಇಬ್ಬರು ಸ್ತ್ರೀಯರು ಹಿಂದೆ ನಿಂತು ಹೂ ವೀಳ್ಯ ನೀಡುತ್ತಿದ್ದಾರೆ. ಎಡಕ್ಕೆ ನೃತ್ಯಮೇಳದಲ್ಲಿ ನರ್ತಕಿಯರು, ವಾದ್ಯ ನುಡಿಸುತ್ತಿರುವವರು, ಹೂಮಾಲೆ ಹಿಡಿದವರು ಇದ್ದಾರೆ. ಹಿಂದೆ ಮೇಲ್ಗಡೆಗೆ ಹಾರಾಡುತ್ತಿರುವ ಗಂಧರ್ವರು ಅದಕ್ಕೂ ಹಿಂದೆ ಆಕಾಶದಲ್ಲಿ ಮೋಡಗಳ ನಡುವೆ ಶಿವ-ಪಾರ್ವತಿ, ವಿಷ್ಣು, ಗಣೇಶ, ಲಕ್ಷ್ಮಿ-ಬ್ರಹ್ಮ ಇತ್ಯಾದಿ ದೇವತೆಗಳು ಇರುವ ಈ ಚಿತ್ರವನ್ನು ಈಚೆಗೆ ಬೇರೆಯವರಿಂದ ಜೀರ್ಣೋದ್ಧಾರ ಮಾಡಿಸಿದ್ದಾರೆ.

ನಾಗರಾಜು ಅವರು ಕಿರು ಪ್ರಮಾಣದ ಚಿತ್ರಗಳನ್ನು ಬರೆದಿದ್ದಾರೆ. ಚಾಮರಾಜ ಒಡೆಯರು, ವಾಣಿ ವಿಲಾಸ ಸನ್ನಿಧಾನದವರು ಹಾಗೂ ದರ್ಬಾರ್ ಹಾಲಿನ ಎರಡು ದೃಶ್ಯಗಳು ಸೂಕ್ಷ್ಮ ಪ್ರಮಾಣದಲ್ಲಿ ರಚಿತವಾಗಿವೆ. ಕೊನೆಯ ಎರಡು ಬೆಟ್ಟದಲ್ಲಿರುವ ರಾಜೇಂದ್ರ ವಿಲಾಸ್ ಅರಮನೆಯಲ್ಲಿದೆ. ಚಾಮರಾಜ ಒಡೆಯರ ಒಂದು ಚಿತ್ರ ನೀಲಗಿರಿಯ ವೆರ್ಸ್‌ಹಿಲ್ ಅರಮನೆಯಲ್ಲಿದೆ. ಇದೇ ರೀತಿಯ ದೇವಾನುದೇವತೆಗಳ ಕಿರು ಅಳತೆಯ ಚಿತ್ರಗಳನ್ನು ಭರತಪುರದ ಅರಮನೆಗೂ ರಚಿಸಿಕೊಟ್ಟರು.

ಮಡಕೇರಿಯ ಸರ್ಕಾರಿ ಕಾಲೇಜಿನಲ್ಲಿ ಗಾಂಧಿ, ನೆಹರೂ ಅವರ ಚಿತ್ರಗಳೂ, ವೆಂಕಟಪ್ಪ ಚಿತ್ರಶಾಲೆಯಲ್ಲಿ ವೆಂಕಟಪ್ಪ ಹಾಗೂ ನೆಹರುರವರ ಚಿತ್ರ, ಕೋಟ ವಿಜಯಲಕ್ಷ್ಮಿ ಛತ್ರದಲ್ಲಿ ಕೋಟ ಸುಬ್ಬಯ್ಯನವರ ಚಿತ್ರ, ವಿಶ್ವೇಶ್ವರಯ್ಯ ವಾಣಿಜ್ಯ ಕೇಂದ್ರದಲ್ಲಿ ಎಂ.ವಿ. ಅವರ ಚಿತ್ರ, ನಂಜನಗೂಡಿನ ಸಹಕಾರಿ ಬ್ಯಾಂಕ್‌ನಲ್ಲಿ ಅದರ ಅಧ್ಯಕ್ಷರ ಹಾಗೂ ಸದಸ್ಯರ ಚಿತ್ರ, ಮೈಸೂರಿನ ಕನ್ನಿಕಾ ಪರಮೇಶ್ವರಿ ಸೊಸೈಟಿಯಲ್ಲಿ ಪರಮೇಶ್ವರಿಯ ಚಿತ್ರ ಮತ್ತು ಬೆಂಗಳೂರಿನ ನಿಮಿಶಾಂಬ ಕಲ್ಯಾಣ ಮಂಟಪದಲ್ಲಿ ಅದೇ ದೇವಿಯ ಚಿತ್ರವೂ ನಾಗರಾಜು ಅವರ ಕುಂಚದಿಂದ ಮೂಡಿಬಂದ ಕೆಲವು ಕಲಾಕೃತಿಗಳು.

ರಾಜರ, ರಾಜ ಪರಿವಾರದವರ ಚಿತ್ರಗಳಲ್ಲಿ ಮಹಾರಾಜರ ತಾಯಿ ವಾಣಿವಿಲಾಸ ಸನ್ನಿಧಾನ ಅವರು, ಜಯಲಕ್ಷಮ್ಮಣ್ಣಿ ಮತ್ತು ಅವರ ಮಗಳು, ಕೃಷ್ಣರಾಜಮ್ಮಣ್ಣಿ, ಚೆಲುವರಾಜಮ್ಮಣ್ಣಿ ಮತ್ತು ಅವರ ಮಗಳು, ಯುವರಾಣಿ ಅವರ ಚಿತ್ರಗಳು ನಾಗರಾಜು ಅವರು ರಚಿಸಿದ ಕೆಲವು ಸ್ತ್ರೀಯರ ಚಿತ್ರಗಳಾಗಿದ್ದು ಅರಮನೆಯ ಗಗನ ಮಾಳಿಗೆಯಲ್ಲಿರಿಸಿದೆ. ಯುವರಾಜರು, ನಾಲ್ಮಡಿಯವರು ಹಾಗೂ ಜಯಚಾಮರಾಜರುಗಳ ವಿವಿಧ ಅಳತೆಯ ಭಾವ-ನಿಲುವುಗಳ ಹಲವಾರು ಚಿತ್ರಗಳು ರಚಿಸಿದ್ದು ಅವುಗಳಲ್ಲಿ ಕೆಲವು ಮೈಸೂರಿನ ಅರಮನೆ, ಪುರಭವನ, ಜಗನ್ಮೋಹನ ಚಿತ್ರಶಾಲೆ, ಲಲಿತ ಮಹಲ್, ಇಂದ್ರ ಭವನ, ಸಹಕಾರಿ ಸೊಸೈಟಿ, ಜನಪದ ಸಂಗ್ರಹಾಲಯ, ಚಾಮರಾಜ ತಾಂತ್ರಿಕ ಶಾಲೆಯ ಮಾರಾಟ ಮಳಿಗೆ, ವಸಂತ ಮಹಲ್ ಅರಮನೆ, ಚಾಮುಂಡಿ ವಿಹಾ ಅರಮನೆ, ಕನ್ನಿಕಾ ಪರಮೇಶ್ವರಿ ಸೊಸೈಟಿ, ಚಾಮುಂಡಿ ಬೆಟ್ಟದ ದೇವಾಲಯ ಮತ್ತು ಅರಮನೆ ಹಾಗೂ

'ನ್ಯಾಶನಲ್ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್'ಗಳಲ್ಲೂ ; ಮಡಕೇರಿಯ ಸರ್ಕಾರಿ ಕಾಲೇಜು, ನಂಜನಗೂಡಿನ ಸಹಕಾರಿ ಬ್ಯಾಂಕ್, ಬೆಂಗಳೂರಿನಲ್ಲಿ ಹಿಂದೆ ಹೇಳಿದ ಸ್ಥಳಗಳಲ್ಲದೆ ವಿಧಾನ ಸೌಧ, ಮೆಯೋಹಾಲ್, ಸೆಂಟ್ರಲ್ ಕಾಲೇಜು ಹಾಗೂ ಸರ್ಕಾರಿ ಕಲಾ ಕಾಲೇಜುಗಳಲ್ಲಿವೆ. ಶ್ರೀ ಶಿವರಾತ್ರೇಶ್ವರ ಆದಿ ಶ್ರೀ ಗುರುಗಳ ಚಿತ್ರ ಮೈಸೂರಿನ ಮಠದಲ್ಲಿದೆ. ಮೈಸೂರು ಪರಕಾಲ ಮಠ, ಉಡುಪಿಯ ಸೋದೆ ಮಠ, ಬೆಂಗಳೂರಿನ ಕಬೀರ ಮಠಗಳಲ್ಲಿ ಆಯಾ ಮಠಕ್ಕೆ ಸಂಬಂಧಿಸಿದ ಚಿತ್ರಗಳಿವೆ. ಮೈಸೂರು ಸಿಂಹಾಸನದ ಮುಂದಿನ ಕಮಾನಿನ ಮೇಲೆ ದೇವಿ ಪಂಚಾಯತನದ ಚಿತ್ರ ರಚಿಸಿದ್ದು ನಾಗರಾಜು ಅವರಿಗೆ ಸಂದ ವಿಶೇಷ ಗೌರವವೆನ್ನಬಹುದು. ವಿಜ್ಞಾನಿ ಸಿ.ವಿ. ರಾಮನ್ ಅವರ ಚಿತ್ರವನ್ನು ಬರೆದುದಾಗಿ ತಿಳಿದುಬರುತ್ತದೆ.

ಖ್ಯಾತ ಗುಬ್ಬಿ ಕಂಪನಿ ಶತಮಾನೋತ್ಸವ ಆಚರಿಸಿದಾಗ ನಾಗರಾಜು ಅವರು ಕೆಲವು ಪರದೆಗಳನ್ನು ರಚಿಸಿಕೊಟ್ಟರು. ಅರಮನೆಯಲ್ಲಿ ಕಲಾವಿದ ಆಗಿದ್ದಾಗಲೇ ಖಾಸಗಿಯಾಗಿ ಚಿತ್ರ ಬರೆದು ಸಂಭಾವನೆ ಪಡೆಯಲು ಅರಮನೆಯಿಂದ ನಿವೃತ್ತರಾದಾಗ ಅನಿವಾರ್ಯವಾಗಿ ಸ್ಟುಡಿಯೋದಲ್ಲಿ ಶ್ರೀ ಸಾಮಾನ್ಯರ ವರ್ಣ ಚಿತ್ರ ರಚಿಸುವ ಹಾಗೂ ಛಾಯಾಚಿತ್ರಗಳಿಗೆ ಬಣ್ಣ ತುಂಬುವ ಕಾಯಕ ಕೈಗೊಳ್ಳಬೇಕಾಯಿತು.

ಕೃತಿ ವಿಮರ್ಶೆ

ಹಿಂದೆ ಹೇಳಿದಂತೆ ನಾಗರಾಜು ಇದ್ದದು ಒಂದು ಸಂಧಿ ಕಾಲದಲ್ಲಿ. ತಾತ ಸುಂದರಯ್ಯ ಸಂಪ್ರದಾಯ ಕಲೆಯಲ್ಲಿ ಹೆಸರು ಪಡೆದಿದ್ದವರು. ಆದರೆ ತಂದೆ ಯಲ್ಲಪ್ಪನವರು ಚಿತ್ರಕಲೆಯನ್ನು ತಮ್ಮ ಕ್ಷೇತ್ರವಾಗಿಸಿಕೊಳ್ಳದೆ ಡ್ರಾಫ್ಟ್ಮನ್ ಆದರು. ಆದರೂ ಅರಮನೆಯನ್ನು ಬಿಡಲಿಲ್ಲ. ಅಲ್ಲದ ಬಿಡುವಿನ ವೇಳೆಯಲ್ಲಿ ಮನೆಯಲ್ಲಿ ಸಂಪ್ರದಾಯ ಹಾಗೂ ನೈಜ ಶೈಲಿಯ ಚಿತ್ರ ರಚಿಸುತ್ತಿದ್ದರು.

ರವಿವರ್ಮ ಅರಮನೆಗೆ ಸಾಕಷ್ಟು ಚಿತ್ರಗಳನ್ನು ರಚಿಸಿಕೊಟ್ಟನಾದರೂ ಆತನನ್ನಾಗಲೀ, ಆತನ ಕೃತಿಯನ್ನಾಗಲೀ ಸಾರ್ವಜನಿಕರಿರಲಿ ಕಲಾವಿದರೆ ಕಂಡಿರಲಿಲ್ಲ. ಆತನ ಪ್ರಭಾವ ಕಲಾವಿದರ ಮೇಲೆ ಆದುದು ಪರೋಕ್ಷವಾಗಿ.

ಕಾಲ ಪ್ರವಾಹದಲ್ಲಿ ನೈಜ ಶೈಲಿ ಅನಿವಾರ್ಯವಾಗಿತ್ತು. ಉಳಿದೆಲ್ಲ ರಂಗದಲ್ಲಿ ಸುಧಾರಣೆ, ಹೊಸದು ಹುಡುಕುತ್ತಿರುವಾಗಲೆ ಯುವರಾಜರು ಹತ್ತಾರು ಬಾರಿ ವಿದೇಶಕ್ಕೆ ಹೋಗಿ ಅಲ್ಲಿಯ ಸಂಸ್ಕೃತಿಗೆ, ನಾಗರೀಕತೆಗೆ, ವಿಜ್ಞಾನದ ಅವಿಶ್ಕಾರಗಳಿಗೆ ಮನಸೋತು ತಮ್ಮ ರಾಜ್ಯದಲ್ಲಿಯೂ ಅವುಗಳ ಚಲಾವಣೆ ತರುತ್ತಿದ್ದ ಕಾಲವದು. ಬ್ರಿಟೀಷ್ ಆಡಳಿತಾಧಿಕಾರಿಗಳು, ಸಹಜವಾಗಿ ಯೂರೋಪ್‌ನ ಸಂಸ್ಕೃತಿಯನ್ನು ಇಲ್ಲಿ ಕಾಣಬಯಸಿದರು. ಹಾಗಾಗಿ ನಾಗರಾಜು ಅವರು ಮತ್ತೆ ತಮ್ಮ ಕಾಲಕ್ಕೆ ಚಿತ್ರಕಲೆಯನ್ನು ತಮ್ಮ ಕ್ಷೇತ್ರವಾಗಿ ರಿಸಿಕೊಂಡರು. ನೈಜವಾದವನ್ನು, ತೈಲಮಾಧ್ಯಮವನ್ನು ಒಗ್ಗಿಸಿಕೊಂಡರು. ಇವರಂತೆ ನೈಜ ಶೈಲಿಯನ್ನು ತಮ್ಮ ಮಾಧ್ಯಮವಾಗಿ ಆರಿಸಿಕೊಂಡವರಲ್ಲಿ ಅಜೀಜ್, ಅಯ್ಯಂಗಾರ್, ಎಸ್.ಎನ್. ಸ್ವಾಮಿದ್ವಯರು ಇತ್ಯಾದಿ ಹಲವರಿದ್ದರು. ಅವರಲ್ಲಿ ಕೆಲವರು ವಂಶ ಪಾರಂಪರಿಕವಾಗಿ ಬಂದ ಕಲಾವಿದರಲ್ಲ. ನಾಗರಾಜು ಅವರದು ಹಾಗಲ್ಲ. ಚಿತ್ರಕಲೆಗೇ ಮೀಸಲಿರಿಸಿದ್ದ ವಂಶವಾಗಿತ್ತು. ಸಾಮಾಜಿಕ ಸ್ಥಿತಿಗೆ ಅನಿವಾರ್ಯವಾಗಿ ಹೊಂದಿಕೊಳ್ಳಬೇಕಾಯಿತು. ಅದನ್ನು ಸಾಧಿಸಿದರು ಎಂದರೆ ಸಂಪ್ರದಾಯವಾದಿಗಳು ಸ್ವಲ್ಪ ಸುಲಭದಲ್ಲಿಯೇ ನೈಜವನ್ನು ಸ್ವೀಕರಿಸಿದರು. ಈ ಪರಿವರ್ತನೆಯ ಕಾಲದಲ್ಲಿ ಸಂಪ್ರದಾಯದ ದೇವಾನುದೇವತೆಗಳ ಚಿತ್ರ ಸಂಯೋಜನೆಯನ್ನು ನೈಜ ಶೈಲಿಯಲ್ಲಿರುವುದು ಅರಮನೆಯ ಖಾಸಗಿ ಸಂಗ್ರಹಾಲಯದಲ್ಲಿ ನೋಡಬಹುದು. ಕಲ್ಯಾಣ ಮಂಟಪದಲ್ಲಿ ಶ್ರೀರಾಮ, ಮಹಿಷ ಮರ್ದಿನಿಯನ್ನು ಪೂಜಿಸುತ್ತಿರುವ ದೃಶ್ಯವನ್ನು ಸುಬ್ರಮಣ್ಯರಾಜು ಅವರು ರೂಪದರ್ಶಿಗಳನ್ನು ಬಳಸಿ ರಚಿಸಿದ್ದು ಈ ಪರಿವರ್ತನೆಯ ಹಂತದಲ್ಲಿ ಮುಖ್ಯವಾಗಿ ಉದಾಹರಿಸಬಹುದು. ರಚನೆಗೆ ಪ್ರೋತ್ಸಾಹಿಸುವ ಅರಸರಿಗೆ, ಬಹುಮಾನವಾಗಿ ಇಲ್ಲವೆ ಕೊಂಡು ಪಡೆದುಕೊಳ್ಳುವ ವಿದೇಶಿಯರಿಗೆ ಹಾಗೂ ನಂತರ ಕಾಲದಲ್ಲಿ ತಾವೂ ಪಡೆಯಬಹುದಾದಷ್ಟು ಸುಲಭವಾಗಿ ಎಟುಕಿದ ಶ್ರೀ ಸಾಮಾನ್ಯರಿಗೆ ನೈಜವಾದ ಚಿತ್ರಗಳು ಪ್ರಿಯವಾಯಿತು. ನಾಗರಾಜು ಮತ್ತು ಅವರ ಓರಗೆಯವರು ಇಂತಹ ಬೇಡಿಕೆಯನ್ನು ಪೂರೈಸಿದರು. ಆದರೆ ನಾಗರಾಜು ಅವರಿಗೆ ಅರಮನೆಯೊಳಗೆ ಹೊಕ್ಕು ಬಳಕೆ ಇದ್ದಂತೆ ಉಳಿದವರಿಗಿರಲಿಲ್ಲ.

ನಾಗರಾಜು ಅವರಿಗೆ ಇನ್ನೊಂದು ಸವಾಲಾಗಿದ್ದು ಛಾಯಾಚಿತ್ರದ ಮೋಡಿ. 1850ರ ವೇಳೆಗೆ ಅದು ಹಳೆಯ ಮೈಸೂರಿಗೆ ಕಾಲಿರಿಸಿತ್ತಾದರೂ ಈ ಶತಮಾನದ ಮೊದಲಿಗೆ ಸುಲಭದಲ್ಲಿ ದೊರೆಯುವಂತಾಯಿತು. ಬದುಕಿರುವಾಗಲೇ ತಮ್ಮ ಭಾವಚಿತ್ರ ಬರೆಯಿಸಬಾರದೆಂಬ ಭಾವನೆ ಭಾರತದಲ್ಲಿ ಇಂದಿಗೂ ಇದೆ. ಆದರೆ ಅಂದು ಮಹಾರಾಜರೇ ತಮ್ಮ ಭಾವಚಿತ್ರ ತೆಗೆಸಿದಾಗ ಜನಸಾಮಾನ್ಯರೂ ಸಂಪ್ರದಾಯ ಮುರಿದರು. ಆದರೆ ಬದುಕಿರುವಾಗ ಕಟ್ಟುಹಾಕಿ ಪ್ರದರ್ಶಿಸುತ್ತಿರಲಿಲ್ಲ.

ಕರ್ನಾಟಕದ ಕಲಾ ಇತಿಹಾಸಕಾರರ ದೃಷ್ಟಿಯಿಂದ ತಪ್ಪಿಸಿಕೊಂಡಿರುವ ಹಂತವೊಂದು ನಾಗರಾಜು ಅವರು ಕ್ಷೇತ್ರಕ್ಕೆ ಬಂದ ಕಾಲದಲ್ಲಿತ್ತು. ಅದೆಂದರೆ ಮಹಾರಾಜರ ಜೊತೆಯಲ್ಲಿ ತಾವು ಇರುವಂತೆ ಚಿತ್ರ ಬರೆಯಿಸಿಕೊಳ್ಳುತ್ತಿದ್ದ, ಛಾಯಾಚಿತ್ರಕ್ಕೆ ತೀರ ಸಮೀಪವಾದ ಪದ್ಧತಿ. ಕೆಲವೊಮ್ಮೆ ಅರಸರೇ ಕಲಾವಿದನಿಗೆ ತಮ್ಮ ಪ್ರಿಯರಾದವರು ತಮ್ಮೊಂದಿಗೆ ಇರುವಂತೆ ಹೇಳಿ ಬರೆಯಿಸಿ ಅದನ್ನು ಚಿತ್ರದಲ್ಲಿರುವ ವ್ಯಕ್ತಿಗೆ ಬಹುಮಾನಿಸುತ್ತಿದ್ದರು. ಅದೊಂದು ಗೌರವ ಎಂದು ಇಬ್ಬರೂ ತಿಳಿಯುತ್ತಿದ್ದರು. ಚಿತ್ರದುರ್ಗದ ಕಾಶಿ ಅಪ್ಪಣ್ಣ ಶೆಟ್ಟರು ಕ್ಷಾಮ ಕಾಲದಲ್ಲಿ ಊರ ಜನರಿಗೆ ನೆರವಾದುದು ಕೇಳಿ ರಾಜರು ಸಂತೋಷಿಸಿ ಶೆಟ್ಟರನ್ನು ಮೈಸೂರಿಗೆ ಕರೆಸಿ ಗೌರವಿಸಿ ಏನು ಬೇಕೆಂದಾಗ ಶೆಟ್ಟರು ಕೇಳಿದ್ದು ತಾವು ಅರಸರೊಂದಿಗೆ ಇರುವಂತೆ ಬರೆಯಿಸಿದ ಚಿತ್ರ. ಈ ಚಿತ್ರ, ಈಗಲೂ ಅವರ ವಂಶದವರ ಬಳಿಯಿದೆ. ಸಂಪ್ರದಾಯದ ಸಂಯೋಜನೆಯಲ್ಲಿ ನೈಜಶೈಲಿಯ ಅನುಕರಣೆಯ ಈ ಹಂತದ ಹಲವು ಚಿತ್ರಗಳನ್ನು ರಾಜು ಅವರು ಮೊದಲಿಗೆ ರಚಿಸಿದ್ದುಂಟು. ಇದೇ ಆಗಲಿ ನಂತರ ಕಾಲದಲ್ಲಿ ರೂಪದರ್ಶಿಯಾಗಿ ಕುಳ್ಳಿರಿಸಿ ಭಾವಚಿತ್ರ ರಚಿಸುತ್ತಿದ್ದುದಕ್ಕೆ ಬೇಡಿಕೆ ಇದ್ದುದ್ದಕ್ಕೆ ಕಾರಣ ಛಾಯಾಚಿತ್ರ ಕಪ್ಪು ಬಿಳಪಿನದಾಗಿದ್ದು ಚಿಕ್ಕ ಅಳತೆಯಲ್ಲಿ ಮಾತ್ರ ದೊರೆಯುತ್ತಿದ್ದುದು ಆದುದರಿಂದ ಛಾಯಾಚಿತ್ರವನ್ನು ತೀರಾ ಹಿಗ್ಗಿಸಿದಂತೆ (ಎನ್‌ಲಾರ್ಜ್) ರಚಿಸಿ ಬಣ್ಣ ತುಂಬುತ್ತಿದ್ದುದೇ ನೈಜವಾದಿಗಳು ಮೊದಲಿಗೆ ಮಾಡಿದ್ದು. ನಂತರವೂ ಕಪ್ಪು ಬಿಳುಪು ಚಿತ್ರವನ್ನು ವಿಸ್ತರಿಸಿ ಮುದ್ರಣ ಮಾಡಬಹುದಾಗಿದ್ದರೂ ಬಣ್ಣದವು ಇರಲಿಲ್ಲ. ಹೀಗಾಗಿ ವಿಸ್ತೃತ ಕಪ್ಪು-ಬಿಳುಪು ಛಾಯಾ ಚಿತ್ರಕ್ಕೆ



ಮೈಸೂರು ಅರಮನೆಯಲ್ಲಿ ದಸರಾ ಪ್ಯಾನಲ್

Dasara Panel at Mysore Palace

(ಮುಖ್ಯವಾಗಿ ಭಾವಚಿತ್ರಕ್ಕೆ) ಬಣ್ಣ ಹಾಕುವ ಪದ್ಧತಿಯನ್ನು ಹಲವಾರು ಕಲಾವಿದರು ಕೈಗೊಳ್ಳಬೇಕಾಯಿತು. ನಾಗರಾಜು ಅವರೂ ಈ ಕೆಲಸ ಮಾಡಿದರು. ಒಂದು ಕಾಲದಲ್ಲಿ ರಾಜಾಶ್ರಯದಲ್ಲಿದ್ದು ಕುಲ ಕಸುಬಾಗಿದ್ದ ಚಿತ್ರಕಲೆ ಹೊಸ ಪದ್ಧತಿ ಬಂದಾಗ ಒಂದು ತಲೆಮಾರು ತಪ್ಪಿ, ನಂತರ ಅದೇ ಕುಲದವರೇ ಹೊಸಪದ್ಧತಿಯನ್ನು ಶಾಲೆಯಲ್ಲಿ ವಿದ್ಯಾಭ್ಯಾಸದ ಮೂಲಕ ಕಲಿತು ಮತ್ತೆ ರಾಜಾಶ್ರಯಕ್ಕೆ ಹೋಗಿ ನೈಜವಾದ ಜೀವಂತವಿರುವವರೆಗೆ ವಿಜೃಂಭಿಸಿ; ರಾಜಾಶ್ರಯ ತಪ್ಪಿದ ಮೇಲೆ ಜನಾಶ್ರಯಕ್ಕೆ ಬಂದು, ತಮ್ಮ ಅಂತಿಮ ಕಾಲದಲ್ಲಿ ತಲೆಹಾಕಿದ್ದ ನವ್ಯ ಪರಂಪರೆಗೆ, ಸ್ಪಂದಿಸಲು ಸಾಧ್ಯವಾಗದೆ ಹೋದ ಚಿತ್ರಕಲಾ ಇತಿಹಾಸದಲ್ಲಿ ಪ್ರಮುಖವಾಗಿ ಕಂಡುಬರುವವರು ವೈ. ನಾಗರಾಜು ಅವರೆಂದರೆ ಅತಿಶಯೋಕ್ತಿಯೇನಲ್ಲ. ತಮ್ಮ ಹಾಗೆ ಹೋರಾಟದ ಬದುಕು ಬೇಡವೆಂಬಂತೆ ಮಕ್ಕಳಿಗೆ ಬಿ.ಇ., ಎಂ.ಟೆಕ್ಸ್‌ಗಳಂತಹ ದೊಡ್ಡ ಪದವಿಗಳನ್ನೇ ಕೊಡಿಸಿದರು. ಸಂಪ್ರದಾಯವಾದಿಗಳು ನೈಜಕ್ಕೆ ಒಲಿದಂತೆ ನವ್ಯಕ್ಕೆ ಒಲಿಯಲಿಲ್ಲ. ನಾಗರಾಜು ಅವರು ವಿದೇಶಕ್ಕೆ ಹೋದಾಗ (1927) ಅಲ್ಲಿ ಮುಖ್ಯವಾದ ಇಸಂಗಳು ಬಂದು ಹೋಗಿತ್ತು. ಪಿಕಾಸೋ, ಷಗಾಲ್ ಮೊದಲಾದವರು ಕ್ರಿಯಾಶೀಲರಾಗಿದ್ದರೂ ನಾಗರಾಜು ಅವರಿಗೆ ಕಂಡದ್ದು ವಿಕ್ಟೋರಿಯನ್ ಕಾಲದ ನೈಜಶೈಲಿಯ ಚಿತ್ರಗಳು "ಪಾಶ್ಚಿಮಾತ್ಯ ಸಂಪ್ರದಾಯದಲ್ಲಿ ಆ ದೇಶದವರು ಬಹಳ ಮುಂದುವರೆದಿದ್ದಾರೆ. ನಮ್ಮ ದೇಶದ ಪ್ರಾಚೀನ ಸೂಕ್ಷ್ಮ ಚಿತ್ರಗಳನ್ನು ಮತ್ತು ನವೀನ ಹಿಂದು (ಇಂಡಿಯನ್ ಆರ್ಟ್) ಪದ್ಧತಿಯ ಸೂಕ್ಷ್ಮ ರೇಖಾ ಚಿತ್ರಗಳನ್ನು ಅನುಸರಿಸಲು ಅವರಿಗೆ ಸುಲಭ ಸಾಧ್ಯವಲ್ಲ" (ಪಿ.ಆರ್. ತಿಪ್ಪೆಸ್ವಾಮಿ ಕಲೋಪಾಸಕರು) ಎಂದು ಹೇಳಿದ ನಾಗರಾಜು ಅವರಿಗೆ ಪಾಶ್ಚಿಮಾತ್ಯ ಕಲಾವಿದರಂತೆ ದೊಡ್ಡ ದೊಡ್ಡ ಚಾರಿತ್ರಿಕ ಚಿತ್ರಗಳನ್ನು ರಚಿಸಬೇಕೆಂಬ ಬಯಕೆ ಮೂಡಿದ್ದು ವಿದೇಶ ಯಾತ್ರೆಯಲ್ಲಿಯೇ. ಅಲ್ಲಿ ಹೋಗಿದ್ದಾಗ ಅಂದಿನ ಸಮಕಾಲೀನ ಕಲೆ ಅವರ ಕಣ್ಣಿಗೆ ಬಿದ್ದಿರಬೇಕು. ಆದರೆ ಅದು ಭಾರತಕ್ಕೆ ಬರುವ ವೇಳೆಗೆ ನಾಗರಾಜು ಅವರಿಗೆ ವಯಸ್ಸಾಗಿತ್ತು. ಹಾಗೂ ಅವುಗಳು ನವ್ಯ ಎಂಬ ಹಣೆಪಟ್ಟಿಯನ್ನು ಅಂಟಿಸಿಕೊಂಡಿತ್ತು. ಆದರೆ ಮಾಡರನ್ ಆರ್ಟ್ ಎಂಬುದು ತೋಚಿದ್ದನ್ನು ಮನ ಬಂದಂತೆ ಗೀಚುವ, ಅಸಂಬದ್ಧ ಬಣ್ಣಗಳಿಂದ ಜನರನ್ನು ಮರುಳು ಮಾಡುವ ಕಲೆ ಎಂದೂ, ಯುವಕರು ಅದರತ್ತ ಮನಸ್ಸು ಮಾಡಬಾರದೆಂದೂ

ನಾಗರಾಜು ಅವರು ಹೇಳಿದ್ದಾಗಲೀ ''ನವೀನ ಕಲೆ ಕೈಲಾಗದವನ ಕೆಲಸವೇ ವಿನಃ ಶ್ರಮದಾನಿ ಕಲಾವಿದನ ಕಲೆ ಅಲ್ಲ . ಅಲ್ಲದೆ ಇದು ಪ್ರಕೃತಿ ಸಿದ್ಧವಾದ ಹುಟ್ಟು ಕಲಾವಿದನನ್ನು ಸಾರ್ವಜನಿಕರಿಂದ ಅಲಕ್ಷಿಸುವಂತೆ ಮಾಡಿ ಜೀವನ ಮಾರ್ಗದ ಪೇಚಾಟಕ್ಕೆ ಸಿಕ್ಕಿಸುವ ಕಲೆಯಾಗಿ ಪರಿಣಮಿಸಿದೆ'' ಎಂದು ಅಭಿಪ್ರಾಯ ಪಟ್ಟಿದ್ದಾಗಲೀ ಬೇರೆಯದೇ ಅರ್ಥದಿಂದ ತೆಗೆದುಕೊಳ್ಳಬೇಕಾಗುತ್ತದೆ. ತಾತ ಸುಂದರಯ್ಯ ಮುದ್ರಣ (ಲಿಥೋ) ಬಂದಾಗ ವಿನ್ಯಾಸ ಬರೆದು ಮುದ್ರಿಸಲು ನೆರವಾದರು. ತಂದೆ ಯಲ್ಲಪ್ಪ ಡ್ರಾಫ್ಟ್‌ಮನ್ ಆದರು. ಸ್ವತಃ ನಾಗರಾಜು ಅವರು ನೈಜಶೈಲಿಯ ಚಿತ್ರಪದ್ಧತಿಯನ್ನು ಶಾಲೆಯಲ್ಲಿ ಕಲಿತವರು. ಎಂದರೆ ಪರಂಪರಾನುಗತವಾಗಿ ಸಹ ಹೊಸದಕ್ಕೆ ಸ್ಪಂದಿಸಿದವರು. ಪ್ರಗತಿ ಪಥದಲ್ಲಿ ಇದ್ದವರು. ಅಂಥವರು ನವ್ಯಕಲೆಯ ಬಗ್ಗೆ ಹೇಳಿದ ಮಾತುಗಳು ಯಾವುದೊ ಅಪಕ್ವ ಕೃತಿಯನ್ನು ಕುರಿತಾಗಿರಬಹುದು. ಅಲ್ಲದೆ ಸಂಪ್ರದಾಯದವರು ನೈಜವಾದವನ್ನು ಸ್ವೀಕರಿಸಿದಾಗಿನದಕ್ಕಿಂತ ಭಿನ್ನವಾದ ರಾಜಕೀಯ, ಸಾಮಾಜಿಕ ಸ್ಥಿತಿ ನವ್ಯದ ಕಾಲಕ್ಕೆ ಬಂದದ್ದು ಹಿಂದಿನವರಿಗೆ ಭ್ರಮನಿರಸನವಾಗಿರಲೂ ಸಾಕು.

ನಾಗರಾಜು ಅವರ ಕೃತಿಗಳಲ್ಲಿ ಮೊದಲಿಗೆ ಭೂದೃಶ್ಯ, ಸಂಯೋಜಿತ ಚಿತ್ರಗಳನ್ನು ಕಾಣುವೆವಾದರೂ ಅವರಿಗೆ ಹೆಸರು ತಂದದ್ದು ಭಾವಚಿತ್ರ ರಚನೆಗಳು. ರಸ್ತೆಯ ಬದಿಯಲ್ಲಿ ಜನರ ಮಧ್ಯೆ ಕುಳಿತು ಭೂದೃಶ್ಯದ ಚಿತ್ರ ರಚಿಸುತ್ತಿದ್ದುದು ಅಂದಿಗೆ ಹೊಸ ಸಂಗತಿ. ಹಾಗೆಯೇ ರೂಪದರ್ಶಿ ಇರಿಸಿಕೊಂಡು ರಚಿಸುವುದು, ಮೂಲ ವ್ಯಕ್ತಿಯನ್ನು ಆದಷ್ಟು ಸಹಜವಾಗಿ ಚಿತ್ರಿಸುವುದು ಜನಪ್ರಿಯವಾಗಿತ್ತು. ರವಿವರ್ಮ ರೂಪದರ್ಶಿ ಇರಿಸಿ ಸಂಯೋಜಿತ ಚಿತ್ರ ರಚಿಸಿದ. ಆದರೆ ನಾಗರಾಜು ಅವರು ಅರಮನೆಯ ಪರಿವಾರದವರ ಸ್ವತಃ ಮಹಾರಾಜರ ಚಿತ್ರಗಳನ್ನೇ, ಅವರನ್ನೇ ಎದುರಿಗೆ ಇರಿಸಿಕೊಂಡು ಚಿತ್ರಿಸಿದರು. ಇಲ್ಲಿ ಮೂಲಕ್ಕೆ ಹೊಂದದಿದ್ದರೆ ಅಗೌರವವಿರಲಿ ಮತ್ತೆ ಅಲ್ಲಿ ಅವಕಾಶವಿರುತ್ತಿರಲಿಲ್ಲ . ಆದರೆ ನಾಗರಾಜು ಅವರು ಯಶಸ್ವಿಯಾದರು. ಅಂತಃಪುರದ ಸ್ತ್ರೀಯರ ಚಿತ್ರಗಳನ್ನು ರಚಿಸುವಷ್ಟು ವಿಶ್ವಾಸಕ್ಕೆ ಪಾತ್ರರಾದರು. ಈ ಶೈಲಿಯಲ್ಲಿ ಎದೆ ಮಟ್ಟದ ಹಾಗೂ ಪೂರ್ಣ ಪ್ರಮಾಣದ ನೂರಕ್ಕೂಮಿಕ್ಕಿ ಚಿತ್ರ ರಚಿಸಿರಬೇಕು. ಅರಮನೆಯಿಂದ

ನಿವೃತ್ತರಾದ ಮೇಲೂ ರೂಪದರ್ಶಿ ಇರಿಸಿ ಚಿತ್ರಿಸಿರುವರಾದರೂ, ಛಾಯಾ ಚಿತ್ರಗಳನ್ನು ತಿದ್ದಿ , ಬಣ್ಣ ತುಂಬುವುದೇ ಸುಲಭ ಎನ್ನುವದಕ್ಕಿಂತಲೂ ಬೇಡಿಕೆ ಇದ್ದುದು ಹಾಗೂ ಸಾಮಾನ್ಯರು ಕೊಳ್ಳುವಂತೆ ಕೈಗೆಟುಕುವ ದರದಲ್ಲಿದ್ದುದು ಮುಖ್ಯ ಕಾರಣ.

ಅರಮನೆಯ ಕಲ್ಯಾಣ ಮಂಟಪದಲ್ಲಿಯ ಏಳೆಂಟು ಕಲಾವಿದರ ಚಿತ್ರಗಳೂ ಸೇರಿದಂತೆ ಮುಖ್ಯವಾಗಿ ಛಾವಚಿತ್ರ ಕೃತಿಗಳಲ್ಲಿ ವೈಯಕ್ತಿಕ ಛಾಪು ಕಡಿಮೆ. ಕೃತಿಗಳು ನಾಗರಾಜು ಅವರದೇ ಎಂದು ಪ್ರತ್ಯೇಕವಾಗಿ ಗುರುತಿಸಲು ಸಾಧ್ಯವಿಲ್ಲ . (ಚಿತ್ರಗಳಿಗೆ ಸಹಿ ಹಾಕುವುದೂ ಈ ಕಾರಣದಿಂದಲೇ ಬಂದುದು. ನೈಜವಾದಿಗಳ ಕಾಲದಲ್ಲಿ ಕೃತಿಯೊಂದಿಗೆ ಕಲಾವಿದನ ಹೆಸರೂ ಕಡ್ಡಾಯವೆಂಬಂತೆ ಚಿತ್ರದ ಅಂಚಿನಲ್ಲಿ ಬರುತ್ತಿದ್ದುದೂ ಶೈಲಿಯಲ್ಲಿ ಅಲ್ಲವಾದರೂ ಹೆಸರಿನ ಮೂಲಕ ತಿಳಿಯಲಿ ಎಂದೇ) ಆದರೆ ಅವರ ಒಟ್ಟು ಚಿತ್ರಗಳನ್ನು ನೋಡಿದರೆ ಮುಖಭಾವದಷ್ಟೇ ಆದ್ಯತೆಯನ್ನು ವಸ್ತ್ರಾಭರಣಗಳಿಗೂ ನೀಡುತ್ತಿದ್ದುದು, ಹಿನ್ನೆಲೆಯನ್ನು ವಿವರವಾಗಿ ಪೂರೈಸುತ್ತಿದ್ದುದು ಕಂಡುಬರುತ್ತದೆ. ತಂಪು (ಕೂಲ್) ಹಾಗೂ ಶುದ್ಧವರ್ಣಗಳನ್ನು ಹೆಚ್ಚಿಗೆ ಬಳಸಿದ್ದಾರೆ. ಇಡೀ ಚಿತ್ರದ ನಿರ್ವಹಣೆಯಲ್ಲಿ ತೀಡಿ ತಿದ್ದಿ ಬರೆಯದೆ ಮೊದಲೇ ಯೋಜಿಸಿದಂತೆ ಅಚ್ಚುಕಟ್ಟಾಗಿ ರಚಿಸಿದ್ದು ಕಂಡುಬರುತ್ತದೆ. ಛಾವಚಿತ್ರ ರಚನೆಗಳಲ್ಲಿ ಫಲಕದ ಅಗಲ ಕಮ್ಮಿಯಿದ್ದು ಉದ್ದ ಹೆಚ್ಚಿರುವುದರಿಂದ ಮುಖ್ಯ ವ್ಯಕ್ತಿಯಷ್ಟೇ ಪ್ರಧಾನವಾಗಿ ಮಧ್ಯದಲ್ಲಿ ಕಂಡುಬರುವಂತೆ ರೂಪಿಸಬೇಕಾಗುತ್ತದೆ. ಒಟ್ಟು ಛಾವಚಿತ್ರ ಸಂಯೋಜನೆ ಒಂದೇ ಎನಿಸಿದರೂ ವೇಷ ಭೂಷಣಗಳಲ್ಲಿ , ಒಡವೆ ತೊಡವೆಗಳಲ್ಲಿ , ಶಿರೋ ಭೂಷಣಗಳಲ್ಲಿ ವೈವಿಧ್ಯತೆ ತಂದು ಏಕತಾನತೆಯನ್ನು ತಪ್ಪಿಸಿದ್ದಾರೆ.

ಈ ಶತಮಾನದ ಎರಡನೇ ಪಾದದಿಂದ ಮೂರನೇ ಪಾದದವರೆಗೆ ಕರ್ನಾಟಕದ ಚಿತ್ರಕಲಾ ಇತಿಹಾಸದಲ್ಲಿ ನಾಗರಾಜು ಅವರಿಗೆ ಒಂದು ಗಣ್ಯಸ್ಥಾನವಿದೆ. ನೈಜಶೈಲಿ ಅಂದಿಗೆ ಅನಿವಾರ್ಯವಾಗಿತ್ತು. ಅಂದಿಗೆ ವೆಂಕಟಪ್ಪನವರು ಸಂಪ್ರದಾಯದಿಂದ ನೇರವಾಗಿ ಕಲ್ಕತ್ತೆಗೆ ಹೋಗಿ ಪುನರುಜ್ಜೀವಿತ ಭಾರತೀಯ ಶೈಲಿಯನ್ನು ಕಲಿತು ಬಂದ ಹಳೆಯ ಮೈಸೂರಿನ ಏಕೈಕ ವ್ಯಕ್ತಿ. ಅವರು ನೈಜಶೈಲಿಯಲ್ಲಿ ರಚಿಸಿರುವವರಾದರೂ ಅವರಿಗದು

ಒಗ್ಗಲಿಲ್ಲ. ಇಲ್ಲಿ ಬಂಗಾಳಿ ಶೈಲಿ ಹೆಚ್ಚು ಪ್ರಚಾರವಾಗಲಿಲ್ಲ. ಆದರೆ ಇಲ್ಲಿ ನೈಜ ಪಂಥದ ಒಂದು ದೊಡ್ಡ ಗುಂಪೇ ಹುಟ್ಟಿಕೊಂಡಿತು. ಆ ಕಾಲದ ಉಳಿದವರಂತೆ ನಾಗರಾಜು ಅವರು ಚಾಮರಾಜೇಂದ್ರ ಶಾಲೆಗೆ ಉಪಾಧ್ಯಾಯರಾಗಿ ಹೋಗಬಹುದಿತ್ತು. ಆದರೆ ಅವರು ಹೋಗಲಿಲ್ಲ. ಆದುದರಿಂದ ಅವರಿಗೆ 'ಶಿಷ್ಯ'ರು ಎಂದು ಯಾರೂ ಇಲ್ಲ. ''ಈವರೆವಿಗೂ ನಾನೇನೂ ಉಪಾಧ್ಯಾಯನಾಗಿ ಕೆಲಸ ಮಾಡಿಲ್ಲ. ಯಾರಾದರೂ ನನ್ನನ್ನು ಕೇಳುವುದುಂಟು, ಎಷ್ಟು ಜನರೆನ್ನು ತಯಾರು ಮಾಡಿದ್ದೀರಿ ಎಂದು? ನನ್ನ ಮನೆ ಹತ್ತಿರವೇ ಚಿತ್ರಕಲಾ ಶಾಲೆ ಇದೆ ಎಂದು ಹೇಳಿ ಚಾಮರಾಜೇಂದ್ರ ತಾಂತ್ರಿಕ ಶಾಲೆಗೆ ಕಳಿಸುತ್ತೇನೆಂದು ಹೇಳುವ ವಾಡಿಕೆ'' ಎಂದು ಅವರೇ ಹೇಳಿದ್ದಾರೆ. ನಾಗರಾಜು ಅವರು ಕೆಲಕಾಲ ಚಿತ್ರಕಲಾ ಪರಿಷತ್ತಿನ ಉಪಾಧ್ಯಕ್ಷರುಗಳಲ್ಲಿ ಒಬ್ಬರಾಗಿದ್ದರೆಂದು ತಿಳಿದುಬರುತ್ತದೆ.

ಸ್ವಾತಂತ್ರ್ಯವೆಂದರೆ ಬ್ರಿಟಿಷರ ವಿರುದ್ಧ ಹೋರಾಡುವುದರೊಂದಿಗೆ ಪರಂಪರಾನುಗತವಾಗಿ ಆಳುತ್ತಿದ್ದ ದೇಶೀಯ ರಾಜರುಗಳನ್ನು ಪದಚ್ಯುತಿ ಮಾಡಿ ಪ್ರಜಾರಾಜ್ಯ ತರುವುದೂ ಆಗಿತ್ತು. ಪ್ರಾಯಶಃ ಬಹುತೇಕ ದೇಶೀಯ ರಾಜರು ಬ್ರಿಟಿಷರ ಕೈಗೊಂಬೆಗಳಾಗಿದ್ದುದೂ ಕಾರಣವಿರಬೇಕು. ಅರಸೊತ್ತಿಗೆಯೊಂದಿಗೆ ಆಶ್ರಯದಾತರಾಗಿದ್ದ ಕಲಾವಿದರೂ ಪದಚ್ಯುತರಾದಾಗ ಅನೇಕರಿಗೆ ಮುಂದಿನ ದಾರಿಕಾಣದಾಯಿತು. ಆಕಸ್ಮಿಕವಾಗಿ ಚಿತ್ರಕಲಾ ಕ್ಷೇತ್ರಕ್ಕೆ ಬಂದ ಕಲಾವಿದರು ಬೆಂಗಳೂರು ಇತ್ಯಾದಿ ಶಹರುಗಳಲ್ಲಿಯ ಕಾರ್ಖಾನೆ ಸೇರಿದರು. ಆದರೆ ವೃತ್ತಿನಿರತ, ಪರಂಪರಿತ ಕಲಾವಿದರಾದ ನಾಗರಾಜು ಹಾಗೂ ಉಳಿದವರು ಮೈಸೂರಿನಲ್ಲಿಯೆ ನಿಂತರು. ಅವರುಗಳ ಕಲೆಯ್ಕನ್ನು ಗುರುತಿಸಿ ಗೌರವಿಸುತ್ತಿದ್ದ ಅರಮನೆ ಇರಲಿಲ್ಲ. ನವೋದಯ ಕಾಲದ ಇವರುಗಳನ್ನಾಗಲೀ ಇವರ ಕಲೆಯನ್ನಾಗಲೀ ಮುಂದಿನ ನವ್ಯರು ಸ್ವೀಕರಿಸಲಿಲ್ಲ. ಕಾವ್ಯ, ನಾಟಕಗಳಂತೆ ನವ್ಯರ ಮೇಲೂ ಪಾಶ್ಚಿಮಾತ್ಯ ಪ್ರಭಾವ ಬಿದ್ದು, ಹಿಂದಿನದಕ್ಕಿಂತ ವಸ್ತು, ನಿರೂಪಣೆ, ಶೈಲಿ, ಉದ್ದೇಶ, ಅರ್ಥ, ತಂತ್ರ ಇತ್ಯಾದಿಯಾಗಿ ಸಂಪೂರ್ಣ ಬದಲಾವಣೆಯನ್ನು ಕಂಡುಕೊಂಡಿತು. ಹೊಸದರ ಹುಡುಕಾಟದಲ್ಲಿ ಹಿಂದಿನದು ಸಂಪೂರ್ಣವಾಗಿ ಮರೆಯಾಯಿತು. ಕೊನೆಯ ಪಕ್ಷ ಕಲಾ ಚರಿತ್ರೆಯ


ದೃಷ್ಟಿಯಿಂದಲಾದರೂ ನವೋದಯ ಕಾಲದ (ಮುಖ್ಯವಾಗಿ ಮೊದಲ ಮಹಾಯುದ್ಧದಿಂದ, ವಿಶಾಲ ಕರ್ನಾಟಕ ಆಗುವವರೆಗೆ) ಕಲೆ-ಕಲಾವಿದರನ್ನು ಗುರುತಿಸುವ ಅವರಿಗೆ ಬಂದ ಒತ್ತಡ, ಸಾಮಾಜಿಕ ಹಾಗೂ ರಾಜಕೀಯ ಪರಿಸ್ಥಿತಿ ಇತ್ಯಾದಿಗಳನ್ನು ಅಭ್ಯಸಿಸಿ ದಾಖಲಿಸುವ ಅಗತ್ಯ ಈಗ ತೀವ್ರವಾಗಿದೆ.

Y. NAGARAJU

Y. Nagaraju was an artist who lived at the time when the art in Karnataka was undergoing an important metamorphosis. This period saw changes in the tradition of art with regard to its style, medium, portrayal, purpose etc. At the same time there were political and social changes too. Nagaraju understood the metamorphosis in these fields. He contributed. Between the two generations Nagaraju and some peers like him who rendered their services to the art played a vital role in the history of art. Socially too, the period was equally important.

PRELUDE

